# ಅಧ್ಯಾಯ–೧೧
# ಇತರ ಇಲಾಖೆಗಳು

ಆಡಳಿತಾರೂಢ ಸರ್ಕಾರವು ತನ್ನ ಆಶ್ವಾಸನೆಗಳ ಈಡೇರಿಕೆಗಾಗಿ ಕಾಲಕಾಲಕ್ಕೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ. ಈ ಯೋಜನೆಗಳನ್ನು ಸರ್ಕಾರದ ವಿವಿಧ ಇಲಾಖೆಗಳು, ಮಂಡಲಿ, ನಿಗಮ ಮೊದಲಾದವುಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಗ್ಯಾಸೆಟಿಯರ್‌ನ ಇತರ ಕೆಲವು ಅಧ್ಯಾಯಗಳಲ್ಲಿ ಅಂತಹ ಕೆಲವೊಂದು ಇಲಾಖೆಗಳ ಕಾರ್ಯಚಟುವಟಿಕೆಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ವಿವಿಧ ಇಲಾಖೆಗಳು, ಮಂಡಲಿ ಹಾಗೂ ನಿಗಮಗಳ ಸ್ಥಾಪನೆ, ಕಛೇರಿಯ ಸಿಬ್ಬಂದಿ ಸ್ವರೂಪ, ಆಡಳಿತ ವ್ಯಾಪ್ತಿ, ಅವುಗಳ ಧ್ಯೇಯೋದ್ದೇಶಗಳು–ಇತ್ಯಾದಿಗಳ ಬಗೆಗೆ ಆಯಾ ಕಛೇರಿಗಳು ಒದಗಿಸಿದ ಮಾಹಿತಿ ಆಧರಿಸಿ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಅಧಿಕಾರಿಗಳು, ಅಧ್ಯಯನಕಾರರು ಹಾಗೂ ಆಸಕ್ತ ಸಾರ್ವಜನಿಕರು ಜಿಲ್ಲೆಯಲ್ಲಿನ ಆಡಳಿತಯಂತ್ರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಳ್ಳಲು ಇಲ್ಲಿನ ಮಾಹಿತಿಗಳು ನೆರವಾಗುತ್ತವೆ.

**ಅಬಕಾರಿ ಇಲಾಖೆ**

ಪಾನನಿರೋಧವನ್ನು ರದ್ದುಪಡಿಸಿ, ಮದ್ಯ ತಯಾರಿಕೆ, ಮಾರಾಟ ಇತ್ಯಾದಿಗಳನ್ನು ಕಾನೂನಿನಂತೆ ನಿಯಂತ್ರಿಸುವುದು ಮತ್ತಿತರ ಉದ್ದೇಶಗಳಿಗಾಗಿ ೧೯೬೭ರಲ್ಲಿ ಅಬಕಾರಿ ಅಧೀಕ್ಷಕರ ಕಛೇರಿಯು ಕೋಲಾರದಲ್ಲಿ ಪ್ರಾರಂಭವಾಯಿತು. ಬಳಿಕ, ೧೯೭೨ರಲ್ಲಿ ಅದು ಅಬಕಾರಿ ಉಪ ಆಯುಕ್ತರ ಕಛೇರಿ ಎಂದು ಬದಲಾಗಿರುತ್ತದೆ. ಕೋಲಾರ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಅಬಕಾರಿ ಉಪ ಆಯುಕ್ತರ ನೆರವಿಗೆ ಅಬಕಾರಿ ಅಧೀಕ್ಷಕ, ಉಪ ಅಧೀಕ್ಷಕ (ಕೇಂದ್ರಸ್ಥಾನ), ವ್ಯವಸ್ಥಾಪಕ ಮೊದಲಾಗಿ ಇತರ ೧೬ ಸಿಬ್ಬಂದಿಗಳಿದ್ದಾರೆ. ಜಿಲ್ಲೆಯ ಪ್ರತೀ ತಾಲೂಕಿಗೆ ಒಂದರಂತೆ ೧೧ ವಲಯ ಕಛೇರಿಗಳಿದ್ದು, ಅಬಕಾರಿ ನಿರೀಕ್ಷಕರು ಆಯಾ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

ಜಿಲ್ಲೆಯಲ್ಲಿ ಅಬಕಾರಿ ರಾಜಸ್ವ ವಸೂಲಿ, ಮದ್ಯ ಮಾರಾಟದ ಅಂಗಡಿಗಳಿಗೆ ಲೈಸೆನ್ಸ್ ನೀಡುವುದು, ಮದ್ಯಪಾನೀಯಗಳ ಗುಣಮಟ್ಟ ಪರಿಶೀಲನೆ, ಅಕ್ರಮ ಮದ್ಯ, ಸಾರಾಯಿ ತಯಾರಿಕಾ ಘಟಕಗಳ ಮೇಲೆ ದಾಳಿ ಮಾಡುವುದು, ಅಕ್ರಮ ಮಾರಾಟದ ವಿರುದ್ಧ ಕ್ರಮ ಜರುಗಿಸುವುದು, ಮೊಕದ್ದಮೆಗಳ ವಿಚಾರಣೆ–ಇತ್ಯಾದಿ ಕಾರ್ಯಗಳು ಈ ಕಛೇರಿಯ ಮುಖ್ಯ ಉದ್ದೇಶಗಳಾಗಿವೆ. ಗ್ರಾಹಕರಿಗೆ ಕಡಿಮೆ ಬೆಲೆಗೆ ಮದ್ಯಗಳನ್ನು ದೊರಕಿಸುವುದು ಹಾಗೂ ಸುಂಕ ಪಾವತಿಸದ ಅನಧಿಕೃತ ಮದ್ಯ ಮಾರಾಟ ಚಟುವಟಿಕೆಯನ್ನು ನಿಯಂತ್ರಿಸುವ ಸಲುವಾಗಿ ರಾಜ್ಯ ಸರ್ಕಾರವು ಈಚೆಗೆ ಪಾನೀಯ ನಿಗಮವನ್ನು ಸ್ಥಾಪಿಸಿದೆ. ಕಛೇರಿಯು ಅಬಕಾರಿ ಕಾಯಿದೆ, ನಾರ್ಕೋಟಿಕ್ ಕಾಯಿದೆ, ಓಪಿಯಂ ಕಾಯಿದೆ ಮೊದಲಾದ ನಿಯಮ–ಅಧಿನಿಯಮಗಳನ್ನು ತನ್ನ ಕಾರ್ಯದಲ್ಲಿ ಅನುಸರಿಸುತ್ತದೆ. ಅಬಕಾರಿ ಆಯುಕ್ತರು, ಕರ್ನಾಟಕ ಹಾಗೂ ಜಂಟಿ ಅಬಕಾರಿ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

**ಅರಣ್ಯ ಇಲಾಖೆ**

ಜಿಲ್ಲೆಯಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ಅಸ್ತಿತ್ವದಲ್ಲಿರುವ ಅರಣ್ಯ ಇಲಾಖೆಯು ಹಿಂದೆ ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಡಿಸ್ಟ್ರಿಕ್ ಫಾರೆಸ್ಟ್ ಆಫೀಸ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ೧೯೮೦ರ ಈಚೆಗೆ ಜಿಲ್ಲಾ ಅರಣ್ಯಾಧಿಕಾರಿ ಹುದ್ದೆಯ ಹೆಸರು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂದು ಬದಲಾಗಿದೆ. ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ, ಚಿಂತಾಮಣಿ ಹಾಗೂ ಮಾಲೂರು ಎಂಬ ಮೂರು ಉಪವಿಭಾಗ ಕಛೇರಿಗಳು ಇದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರ ಅಧೀನದಲ್ಲಿ ಮೂವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ೧೩ ಮಂದಿ ವಲಯ ಅರಣ್ಯಾಧಿಕಾರಿಗಳು ಸೇರಿದಂತೆ ಒಟ್ಟು ೨೬೪ ಜನ ವಿವಿಧ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅರಣ್ಯಗಳ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ, ಬಂಜರು ಭೂಮಿ ಹಾಗೂ ಕೃಷಿ ಪ್ರದೇಶದಲ್ಲಿ ಮರ ಬೆಳೆಸುವುದೂ ಸೇರಿದಂತೆ ಸಾಮಾಜಿಕ ವನ ನಿರ್ಮಾಣ ಮಾಡುವುದು, ಆ ಮೂಲಕ ಉರುವಲು ಸೌದೆ, ಹಸಿರುಗೊಬ್ಬರ ಬೇಡಿಕೆ ಪೂರೈಸುವುದು ಈ ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ. ಇದರ ಅನುಸಾರವಾಗಿ ಕೇಂದ್ರ ಪುರಸ್ಕೃತ ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆಯಡಿಯಲ್ಲಿ ನೆಡುತೋಪುಗಳನ್ನು ಬೆಳೆಸುವುದು, ಮರವಲ್ಲದ ಕಿರು ಅರಣ್ಯ ಉತ್ಪನ್ನ ಹಾಗೂ ಔಷಧಿಗಿಡಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಔಷಧಿ ವನಗಳನ್ನು ಬೆಳೆಸುವುದು, ರಾಷ್ಟ್ರೀಯ ಅರಣ್ಯೀಕರಣ ಯೋಜನೆಯಂತೆ ಗ್ರಾಮೀಣರ ಸಹಯೋಗದಲ್ಲಿ ಕೃತಕ ಅರಣ್ಯ ಪುನರುತ್ಪತ್ತಿ, ಬಿದಿರು ನೆಡುತೋಪು ಬೆಳೆಸುವುದು, ನಗರಪ್ರದೇಶದಲ್ಲಿ ಸಾಲು ಮರ ಹಾಗೂ ಉದ್ಯಾನಗಳನ್ನು ಬೆಳೆಸುವುದು, ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸುವುದು ಮೊದಲಾದ ಹಲವಾರು ಕಾರ್ಯಕ್ರಮಗಳನ್ನು ಈ ಕಛೇರಿ ಅನುಷ್ಠಾನಗೊಳಿಸುತ್ತಿದೆ. ಈ ಇಲಾಖೆಯು ತನ್ನ ಆಡಳಿತ ನಿರ್ವಹಣೆಯಲ್ಲಿ ಕೆಸಿಎಸ್‌ಆರ್ ಸೇರಿದಂತೆ ಫಾರೆಸ್ಟ್ ಆಕ್ಟ್ ಅಂಡ್ ರೂಲ್ಸ್, ವೈಲ್ಡ್ ಲೈಫ್ ಪ್ರಿಜರ್‌ವೇಶನ್ ಆಕ್ಟ್, ೧೯೮೮ರ ಫಾರೆಸ್ಟ್ ಕನ್ಸರ್‌ವೇಶನ್ ಆಕ್ಟ್ ಮೊದಲಾದ ನಿಯಮ ಹಾಗೂ ಅಧಿನಿಯಮಗಳನ್ನು ಪಾಲಿಸುತ್ತಿದೆ. ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ವೃತ್ತ ಬೆಂಗಳೂರು ಅವರು ಈ ಇಲಾಖೆಯ ಮೇಲಧಿಕಾರಿಯಾಗಿರುತ್ತಾರೆ.

**ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ**

ಕಾಲಕಾಲಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಮ್ಮಿಕೊಳ್ಳುವ ವಿವಿಧ ಯೋಜನೆಗಳಿಗೆ ಪೂರಕವಾಗಿ ಅಗತ್ಯವಾದ ಸಮೀಕ್ಷೆಗಳನ್ನು ನಡೆಸಿ ಜಿಲ್ಲೆಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಿ ಪ್ರಕಟಿಸುವ ಉದ್ದೇಶದಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಅವರ ಕಛೇರಿಯು ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಅವರು ಕಛೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಸಹಾಯಕ ನಿರ್ದೇಶಕ, ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಗಣತಿದಾರರು ಮೊದಲಾಗಿ ೩೫ ಜನ ಇತರ ಸಿಬ್ಬಂದಿ ಇದ್ದಾರೆ. ಜಿಲ್ಲೆಯ ಎಲ್ಲಾ ತಾಲೂಕುಗಳ ಜನನ ಮರಣ ವರದಿಗಳ ತಪಾಸಣೆ, ಮಳೆಗೆ ಸಂಬಂಧಿಸಿದ ಅಂಕಿಅಂಶಗಳ ಸಂಗ್ರಹಣೆ, ಜಿಲ್ಲಾ ಅಂಕಿಅಂಶಗಳ ನೋಟ ಹಾಗೂ ಜಿಲ್ಲಾ ಆರ್ಥಿಕ ಮತ್ತು ಸಾಮಾಜಿಕ ಅವಲೋಕನಗಳನ್ನು ಪ್ರಕಟಿಸುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಜಿಲ್ಲೆಯ ಆಯಾ ತಾಲೂಕು ತಹಸೀಲ್ದಾರರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವ ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿದಾರರು ಈ ಇಲಾಖೆಯ ನಿರ್ದೇಶನಕ್ಕೆ ಒಳಪಟ್ಟಿರುತ್ತಾರೆ. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು–ಅವರು ಮೇಲಧಿಕಾರಿಯಾಗಿರುತ್ತಾರೆ.

**ಆರಕ್ಷಕ ಇಲಾಖೆ**

ಅಪರಾಧಗಳನ್ನು ನಿಯಂತ್ರಿಸುವ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಆರಕ್ಷಕ ಅಧೀಕ್ಷಕರ ಕಛೇರಿಯು ಕೋಲಾರದಲ್ಲಿ ೧೯೫೬ರಲ್ಲಿ ಪ್ರಾರಂಭವಾಗಿದೆ. ಆರಕ್ಷಕ ಅಧೀಕ್ಷಕರು ಮುಖ್ಯಸ್ಥರಾಗಿರುವ ಈ ಕಛೇರಿಯು ಬಂಗಾರಪೇಟೆಯನ್ನು ಹೊರತುಪಡಿಸಿ, ಕೋಲಾರ ಜಿಲ್ಲೆಯಾದ್ಯಂತದ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತದೆ. ಈ ಕಛೇರಿಯಲ್ಲಿ ಆರಕ್ಷಕ ಅಧೀಕ್ಷಕರ ನೆರವಿಗೆ ಹೆಚ್ಚುವರಿ ಆರಕ್ಷಕ ಅಧೀಕ್ಷಕ, ಉಪ ಆರಕ್ಷಕ ಅಧೀಕ್ಷಕ ಮೊದಲಾದ ಸಿವಿಲ್ ಸಿಬ್ಬಂದಿ, ಆರ್.ಪಿ.ಐ.,

ಆರ್.ಎಸ್.ಐ. ಮತ್ತಿತರ ಡಿ.ಎ.ಆರ್. ಸಿಬ್ಬಂದಿ, ಪಿ.ಐ., ಪಿ.ಎಸ್.ಐ. ಮೊದಲಾದ ನಿಸ್ತಂತು ಬಲ ಸಿಬ್ಬಂದಿ, ಎ.ಎ.ಓ., ಎಸ್.ಎಸ್. ಮೊದಲಾದ ಲಿಪಿಕ ಸಿಬ್ಬಂದಿ ಮತ್ತಿತರ ವಿವಿಧ ವರ್ಗಗಳ ಅಧಿಕಾರಿ, ಸಿಬ್ಬಂದಿ ಇದ್ದಾರೆ. ಈ ಕಛೇರಿಯ ವ್ಯಾಪ್ತಿಯಲ್ಲಿ ೨೮ ಪೊಲೀಸ್ ಠಾಣೆಗಳು, ೧೦ ವೃತ್ತ ಕಛೇರಿಗಳು, ನಾಲ್ಕು ಉಪ ವಿಭಾಗ ಕಛೇರಿಗಳಿದ್ದು, ಉಪ ವಿಭಾಗ ಕಛೇರಿಗಳಲ್ಲಿ ಆರಕ್ಷಕ ಉಪ ಅಧೀಕ್ಷಕರು, ವೃತ್ತ ಕಛೇರಿಗಳಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ರು ಹಾಗೂ ಪೊಲೀಸ್ ಠಾಣೆಗಳಲ್ಲಿ ಪಿ.ಎಸ್.ಐ. ಅವರು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ಭಾರತೀಯ ದಂಡ ಸಂಹಿತೆ, ದಂಡ ಪ್ರಕ್ರಿಯಾ ಸಂಹಿತೆ, ಪೊಲೀಸ್ ಕಾಯ್ದೆ, ಮೋಟಾರು ವಾಹನ ಕಾಯ್ದೆ ಮತ್ತಿತರ ಕಾಯ್ದೆ ಮತ್ತು ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಂಡಿದೆ. ಆರಕ್ಷಕ ಮಹಾನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿದ್ದಾರೆ.

**ಆರೋಗ್ಯ ಇಲಾಖೆ**

ಕೋಲಾರ ಆರೋಗ್ಯ ಅಧಿಕಾರಿಯು ಜಿಲ್ಲಾ ಆರೋಗ್ಯ ಕಛೇರಿಯ ಮುಖ್ಯಸ್ಥರಾಗಿ 'ಜಿಲ್ಲಾ ವೈದ್ಯಕೀಯ ಮತ್ತು ನೈರ್ಮಲ್ಯ ಅಧಿಕಾರಿ'ಯಿಂದ ೧೯೫೬ರಲ್ಲಿ ಅಧಿಕಾರ ಸ್ವೀಕರಿಸಿದರು. ೧೯೬೫ರಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಗಳನ್ನು ರಾಜ್ಯಮಟ್ಟದಲ್ಲಿ ವಿಲೀನಗೊಳಿಸಿದಾಗ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನಾ ಅಧಿಕಾರಿಯು ಇಲಾಖಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ೧೯೭೮ರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವ ಈ ಕಛೇರಿಯ ಅಧೀನದಲ್ಲಿ ಜಿಲ್ಲಾ ಮಲೇರಿಯಾ ಕಛೇರಿ, ಜಿಲ್ಲಾ ಕುಷ್ಠರೋಗ ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳು ಮೊದಲಾದ ವಿವಿಧ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಎಂ.ಸಿ.ಇ., ಬಜೆಟ್ ಮ್ಯಾನ್ಯುಯಲ್, ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ ಆಕ್ಟ್ ಮತ್ತು ಪಿ.ಅಂಡ್‌ಡಿ.ಟಿ. ಆಕ್ಟ್ ಮೊದಲಾದ ಕಾಯಿದೆ ಹಾಗೂ ನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತದೆ (ಹೆಚ್ಚಿನ ವಿವರಕ್ಕೆ ಅಧ್ಯಾಯ ೧೫ ನೋಡಿರಿ).

**ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ**

ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳ ಮೂಲಕ ಜಿಲ್ಲೆಯ ಅರ್ಹ ನಾಗರಿಕರಿಗೆ ದಿನನಿತ್ಯದ ಕೆಲವೊಂದು ಅಗತ್ಯ ವಸ್ತುಗಳನ್ನು ಪೂರೈಸುವ ಉದ್ದೇಶದಿಂದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರ ಕಛೇರಿಯು ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳ ತಹಶೀಲ್ದಾರರು ಆಯಾ ತಾಲೂಕು ಹಂತದಲ್ಲಿ ಇಲಾಖಾ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಾಗಿರುತ್ತಾರೆ. ಕೆಜಿಎಫ್ ಪಡಿತರ ಪ್ರದೇಶದಲ್ಲಿ ಪಡಿತರ ಅಧಿಕಾರಿಯು ಆಹಾರ ಇಲಾಖಾ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಹಳದಿ ಮತ್ತು ಅಂತ್ಯೋದಯ ಅನ್ನ ಪಡಿತರ ಚೀಟಿಗಳ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಹಳದಿ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ವಿತರಿಸುವುದು, ೧–೭–೨೦೦೩ರಿಂದ ಅಕ್ಷರದಾಸೋಹ ಕಾರ್ಯಕ್ರಮದಡಿ ಶಾಲೆಗಳಲ್ಲಿ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದಲ್ಲಿ ಸಹಕರಿಸುವುದು ಮೊದಲಾದ ಕಾರ್ಯಗಳನ್ನು ಈ ಇಲಾಖೆ ನಿರ್ವಹಿಸುತ್ತದೆ. ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಕೋಲಾರ ಅವರು ಮೇಲಧಿಕಾರಿಯಾಗಿರುತ್ತಾರೆ.

**ಕಂದಾಯ ಇಲಾಖೆ**

ರಾಜ್ಯಗಳ ಪುನರ್ ರಚನೆಗೆ ಮುನ್ನಿನಿಂದಲೂ ಅಸ್ತಿತ್ವದಲ್ಲಿರುವ ಕಂದಾಯ ಇಲಾಖೆಯು ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಒಂದೆನಿಸಿದೆ. ಜಿಲ್ಲಾಧಿಕಾರಿ ಅವರು ಈ ಇಲಾಖೆಯ ಮುಖ್ಯ ಅಧಿಕಾರಿಯಾಗಿದ್ದಾರೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ ಇವರ ಅಧೀನದಲ್ಲಿ ಉಪ ವಿಭಾಗಗಳು, ತಾಲೂಕು ಕಛೇರಿಗಳು ಕರ್ತವ್ಯ ನಿರ್ವಹಿಸುತ್ತವೆ. ಕೋಲಾರ ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಕೋಲಾರ (ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ, ಮಾಲೂರು ಮತ್ತು ಬಂಗಾರಪೇಟೆ ತಾಲೂಕುಗಳ ವ್ಯಾಪ್ತಿ) ಹಾಗೂ ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೌರಿಬಿದನೂರು, ಚಿಂತಾಮಣಿ, ಗುಡಿಬಂಡೆ ಮತ್ತು ಶಿಡ್ಲಘಟ್ಟ ತಾಲೂಕುಗಳ ವ್ಯಾಪ್ತಿ) ಎಂಬ ಎರಡು ಕಂದಾಯ ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಉಪ ವಿಭಾಗ

ಕಛೇರಿಗಳಿಗೆ ಸಹಾಯಕ ಆಯುಕ್ತರು ಮುಖ್ಯಸ್ಥರಾಗಿದ್ದು ಅವರ ನೆರವಿಗೆ ವ್ಯವಸ್ಥಾಪಕ, ಪ್ರಥಮ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇರುತ್ತಾರೆ. ತಹಸೀಲ್ದಾರರು ಆಯಾ ತಾಲೂಕಿನ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ಕಛೇರಿಯಲ್ಲಿ ಶಿರಸ್ತೇದಾರ್ ಅಥವಾ ಉಪ ತಹಶೀಲ್ದಾರ್, ಪ್ರಥಮ ದರ್ಜೆ ಸಹಾಯಕ ಅಥವಾ ಪ್ರಥಮ ದರ್ಜೆ ರಾಜಸ್ವ ನಿರೀಕ್ಷಕ, ಗ್ರಾಮ ಲೆಕ್ಕಿಗ ಮತ್ತಿತರ ಸಿಬ್ಬಂದಿ ಇರುತ್ತಾರೆ. ಜಿಲ್ಲಾಧಿಕಾರಿ ಅವರ ಕಛೇರಿಯಲ್ಲಿ ಕೇಂದ್ರಸ್ಥಾನಿಕ ಸಹಾಯಕ, ಚುನಾವಣಾ ಸಹಾಯಕ ಆಯುಕ್ತ, ಮುನಿಸಿಪಲ್ ತಹಶೀಲ್ದಾರ್, ಮುಜರಾಯಿ ಸಹಾಯಕ ಮೊದಲಾದ ಅಧಿಕಾರಿ, ಸಿಬ್ಬಂದಿಗಳು ಇರುತ್ತಾರೆ.

ಸರಕಾರದ ಜಿಲ್ಲಾ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುವ ಹೊಣೆ ಹೊತ್ತ ಜಿಲ್ಲಾಧಿಕಾರಿ ಅವರು ಜಿಲ್ಲಾ ದಂಡಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ. ಕಾನೂನು ಸುವ್ಯವಸ್ಥೆ, ಕಂದಾಯ ನಿಗಧಿ, ಕಂದಾಯ ವಸೂಲಾತಿ ಮತ್ತು ವಸೂಲಾದ ಕಂದಾಯವನ್ನು ಸರಕಾರಕ್ಕೆ ಜಮೆ ಮಾಡುವುದು, ಸರಕಾರಿ ಭೂಮಿಯ ಮೇಲ್ವಿಚಾರಣೆ, ಸಾರ್ವಜನಿಕರ ಕುಂದುಕೊರತೆ ವಿಚಾರಣೆ ಮೊದಲಾದ ಕಾರ್ಯಗಳು ಜಿಲ್ಲಾಧಿಕಾಯರಿಯವರಿಗೆ ಸಂಬಂಧಿಸಿರುತ್ತವೆ. ಸಮಾಜ ಕಲ್ಯಾಣ, ಆಹಾರ ಮತ್ತು ನಾಗರಿಕರ ಪೂರೈಕೆ, ಆರೋಗ್ಯ ಮತ್ತಿತರ ಇಲಾಖೆಗಳಿಗೆ ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿಗಳು ಇದ್ದರೂ ಆ ಎಲ್ಲವುಗಳ ಕಾರ್ಯಗಳ ಮೇಲ್ವಿಚಾರಣೆ ಸಹ ಜಿಲ್ಲಾಧಿಕಾರಿಯವರದಾಗಿರುತ್ತದೆ. ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ (ಹೆಚ್ಚಿನ ವಿವರಕ್ಕೆ: ಆಡಳಿತ ಮತ್ತು ರಾಜಸ್ವ ಅಧ್ಯಾಯ ನೋಡಿ).

### ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ೧೯೭೭ರಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಹಾಯಕ ನಿರ್ದೇಶಕರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದು, ಇವರ ನೆರವಿಗೆ ಗುಮಾಸ್ತರೂ ಸೇರಿ ಇತರ ಐವರು ಸಿಬ್ಬಂದಿ ಇದ್ದಾರೆ. ಕನ್ನಡ ಅಭಿವೃದ್ಧಿ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ, ಅನುಷ್ಠಾನಗಳು ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ಈ ಉದ್ದೇಶಗಳ ಈಡೇರಿಕೆಗಾಗಿ ಸಾಂಸ್ಕೃತಿಕ ಸೌರಭ, ಯುವ ಪ್ರತಿಭೆ, ಚಿಗುರು, ಗ್ರಾಮೀಣ ದರ್ಶನ, ಗಡಿನಾಡು ಉತ್ಸವ, ಕನ್ನಡ ಆಡಳಿತ ಕಾರ್ಯಶಿಬಿರ ಮೊದಲಾದ ವಿವಿಧ ಕಾರ್ಯಕ್ರಮಗಳನ್ನು ಈ ಕಛೇರಿ ನಡೆಸುತ್ತದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಿಲ್ಲೆಯ ನಗರ ಮತ್ತು ಪಟ್ಟಣ ಪ್ರದೇಶದ ನಾಗರಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಮತ್ತು ಒಳಚರಂಡಿ ವ್ಯವಸ್ಥೆಯ ಯೋಜನೆಗಳನ್ನು ತಯಾರಿಸಿ, ಕಾರ್ಯಗತಗೊಳಿಸಿ ಮುಂದಿನ ನಿರ್ವಹಣೆಗಾಗಿ ಸಂಬಂಧಿಸಿದ ನಗರಸಭೆ ಹಾಗೂ ಪುರಸಭೆಗಳಿಗೆ ಹಸ್ತಾಂತರಿಸುವುದು ಹಾಗೂ ಆ ವ್ಯವಸ್ಥೆಗಳಿಗೆ ಸಂಬಂಧಿಸಿದ ತಾಂತ್ರಿಕ ಸಲಹೆ ನೀಡುವುದು ಮೊದಲಾದ ಕಾರ್ಯೋದ್ದೇಶಗಳನ್ನು ಈ ಮಂಡಳಿ ಹೊಂದಿರುತ್ತದೆ. ೧೯೭೫ಕ್ಕೆ ಮೊದಲು ಈ ಕಾರ್ಯಗಳನ್ನು ಜನಾರೋಗ್ಯ ಇಲಾಖೆ (ಲೋಕೋಪಯೋಗಿ ಇಲಾಖೆ)ಯು ನಿರ್ವಹಿಸುತ್ತಿದ್ದಿತು.

ಕೋಲಾರ ಜಿಲ್ಲೆಯಲ್ಲಿ ಮಂಡಳಿಯ ಎರಡು ಉಪವಿಭಾಗಗಳಿದ್ದು ಬೇತಮಂಗಲ ಉಪವಿಭಾಗಕ್ಕೆ ಕೋಲಾರ, ಬಂಗಾರಪೇಟೆ, ಶ್ರೀನಿವಾಸಪುರ, ಮುಳಬಾಗಿಲು, ಮಾಲೂರು ಹಾಗೂ ಬೇತಮಂಗಲ ನಗರ/ಪುರಸಭೆಗಳು ಸೇರಿವೆ. ಕೆಜಿಎಫ್ ನಗರಕ್ಕೆ ಗ್ರಾಹಕರ ಹಂತದವರೆಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯೂ ಈ ಕಛೇರಿಯದೇ ಆಗಿದೆ. ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ ಹಾಗೂ ಗೌರಿಬಿದನೂರು ಪುರಸಭೆಗಳೂ ಸೇರಿವೆ. ಪ್ರತೀ ಉಪವಿಭಾಗ ಕಛೇರಿ ಮುಖ್ಯಸ್ಥರಾಗಿ ಒಬ್ಬೊಬ್ಬ ಸಹಾಯಕ ಕಾರ್ಯಪಾಲಕ ಅಭಿಯಂತರ ಇದ್ದು ಅವರ ನೆರವಿಗೆ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಇತ್ಯಾದಿ ಇತರ ಸಿಬ್ಬಂದಿ ಇದ್ದಾರೆ. ಕೆ.ಸಿ.ಎಸ್.ಆರ್. ಮತ್ತಿತರ ಸರಕಾರೀ ನಿಯಮಗಳ ಜೊತೆಗೆ ಮಂಡಲಿಯದೇ ಆದ ಹುದ್ದೆ ಮತ್ತು ನೇಮಕಾತಿ ನಿಯಮಗಳನ್ನು ಈ ಕಚೇರಿಗಳು ಅನುಸರಿಸುತ್ತವೆ. ಕಾರ್ಯಪಾಲಕ ಅಭಿಯಂತರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಬೆಂಗಳೂರು ಅವರು ಮೇಲಧಿಕಾರಿ ಆಗಿದ್ದಾರೆ.

**ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ**

ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗಾಗಿ ೧೯೭೮ರಲ್ಲಿ ಕೋಲಾರದಲ್ಲಿ ಸ್ಥಾಪಿತವಾದ ಈ ನಿಗಮ ಕಛೇರಿಯು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರವನ್ನು ಹೊಂದಿದೆ. ಜಿಲ್ಲಾ ವ್ಯವಸ್ಥಾಪಕ ಈ ಕಛೇರಿಯ ಮುಖ್ಯಸ್ಥ ಆಗಿದ್ದು, ಅವರ ನೆರವಿಗೆ ವಸೂಲಾತಿ ಅಧಿಕಾರಿ, ತಾಲೂಕು ಅಭಿವೃದ್ಧಿ ಅಧಿಕಾರಿ, ಕಛೇರಿ ಅಧೀಕ್ಷಕ ಮೊದಲಾಗಿ ಒಟ್ಟು ೧೩ ಜನ ಸಿಬ್ಬಂದಿ ಇದ್ದಾರೆ. ಆಯಾ ತಾಲೂಕಿನಲ್ಲಿ ನಿಗಮದ ಯೋಜನೆಗಳ ಅನುಷ್ಠಾನಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಕಛೇರಿಯಲ್ಲಿ ನಿಗಮದ ತಾಲೂಕು ಅಭಿವೃದ್ಧಿ ಅಧಿಕಾರಿಗಳು ಇದ್ದಾರೆ. ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಸ್ವಯಂ ಉದ್ಯೋಗ, ಭೂ ಒಡೆತನ, ನೇರ ಸಾಲ, ಹೈನುಗಾರಿಕೆ, ಸಫಾಯಿ ಕರ್ಮಚಾರಿ ಪುನರ್‌ವಸತಿ, ಗಂಗಾ ಕಲ್ಯಾಣ ಮೊದಲಾದ ಯೋಜನೆಗಳನ್ವಯ ಕಾರ್ಯಗಳನ್ನು ಈ ನಿಗಮ ನಿರ್ವಹಿಸುತ್ತದೆ. ವ್ಯವಸ್ಥಾಪಕ ನಿರ್ದೇಶಕ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿದ್ದಾರೆ.

**ಕರ್ನಾಟಕ ಭೂ ಸೇನಾ ನಿಗಮ ನಿಯಮಿತ**

ಕರ್ನಾಟಕ ಭೂ ಸೇನಾ ನಿಗಮ ನಿಯಮಿತ ಸಂಸ್ಥೆಯು ೧೯೭ರಿಂದ ಕೋಲಾರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಉಪ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಸಹಾಯಕ ನಿರ್ದೇಶಕ (ತಾಂತ್ರಿಕ), ಕಾರ್ಯದಳಪತಿ, ಅಧೀಕ್ಷಕ ಮೊದಲಾಗಿ ಎಂಟು ಜನ ಇತರ ಸಿಬ್ಬಂದಿ ಇದ್ದಾರೆ. ಕೋಲಾರ ಉಪವಿಭಾಗ (ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಮಾಲೂರು ಹಾಗೂ ಶ್ರೀನಿವಾಸಪುರ ತಾಲೂಕುಗಳ ವ್ಯಾಪ್ತಿ) ಮತ್ತು ಚಿಕ್ಕಬಳ್ಳಾಪುರ ಉಪವಿಭಾಗ (ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಶಿಡ್ಲಘಟ್ಟ, ಚಿಂತಾಮಣಿ ಹಾಗೂ ಗುಡಿಬಂಡೆ ತಾಲೂಕುಗಳ ವ್ಯಾಪ್ತಿ)ಗಳು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಹಾಯಕ ನಿರ್ದೇಶಕರು ಅವುಗಳ ಮುಖ್ಯಸ್ಥರಾಗಿರುತ್ತಾರೆ.

ಗ್ರಾಮಾಂತರ ಪ್ರದೇಶದ ನಿರುದ್ಯೋಗಿ ಯುವಕರು ಹಾಗೂ ಅರೆಕಾಲಿಕ ನಿರುದ್ಯೋಗಿಗಳನ್ನು ಸಂಘಟಿಸಿ ಅವರಿಗೆ ಸೈನಿಕ ಶಿಸ್ತಿನಿಂದ ಕೆಲಸ ಮಾಡುವಂತೆ ತರಬೇತಿ ನೀಡುವುದು, ಅಭಿವೃದ್ಧಿ ಆಧಾರಿತ ಕಾಮಗಾರಿಗಳನ್ನು ಸರ್ಕಾರ ನಿಗದಿಪಡಿಸಿದ ದರಗಳಲ್ಲಿ ನಿರ್ಮಿಸಿ, ಅವುಗಳ ಉಸ್ತುವಾರಿಯನ್ನು ಎಂಜಿನಿಯರುಗಳ ಮುಖಾಂತರ ಮಾಡಿಸಿ, ಯೋಜನೆಗಳ ಫಲವು ನೇರವಾಗಿ ಕೆಲಸ ಮಾಡಿದವರಿಗೇ ತಲುಪುವಂತೆ ಮಾಡುವುದು ಮೊದಲಾದ ಉದ್ದೇಶಗಳನ್ನು ಈ ಕಛೇರಿ ಹೊಂದಿದೆ. ಅದಕ್ಕನುಗುಣವಾಗಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ ಕಟ್ಟಡಗಳು, ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳು, ಅಂಗನವಾಡಿ ಕಟ್ಟಡಗಳು ಮೊದಲಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಮಂಡಲಿಗಳು, ಪ್ರಾಧಿಕಾರಗಳು ವಹಿಸುವ ಎಲ್ಲಾ ಕಾಮಗಾರಿಗಳನ್ನು, ನಿರ್ಮಾಣ ಕಾರ್ಯಗಳನ್ನು ಮಾಡಿ, ಸಂಬಂಧಿಸಿದವರಿಗೆ ಹಸ್ತಾಂತರಿಸುವ ಕಾರ್ಯಗಳನ್ನು ಈ ನಿಗಮ ನಿರ್ವಹಿಸುತ್ತಿದೆ. ಜಂಟಿ ನಿರ್ದೇಶಕ, ಕರ್ನಾಟಕ ಭೂ ಸೇನಾ ನಿಗಮ ನಿಯಮಿತ, ಬೆಂಗಳೂರು ವಲಯ, ಬೆಂಗಳೂರು ಇವರು ಮೇಲಧಿಕಾರಿಯಾಗಿದ್ದಾರೆ.

**ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ**

ರಾಜ್ಯದ ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುವುದು, ನಿರುದ್ಯೋಗಿ ಹಿಂದುಳಿದ ವರ್ಗಗಳ ಯುವ ಜನರಿಗೆ ವೃತ್ತಿ ಕುಶಲತೆಯ ಅಭಿವೃದ್ಧಿಗಾಗಿ ಅಗತ್ಯವಾದ ತರಬೇತಿಗಳನ್ನು ನೀಡುವುದು ಮೊದಲಾದ ಉದ್ದೇಶಗಳಿಗಾಗಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತವನ್ನು ೧೯೭೭ರಲ್ಲಿ ಸ್ಥಾಪಿಸಲಾಗಿದ್ದು ಕೋಲಾರ ಜಿಲ್ಲಾ ಕಛೇರಿಯು ೨೦೦೦ದಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯವಸ್ಥಾಪಕ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಅಭಿವೃದ್ಧಿ ಅಧಿಕಾರಿ, ಸಹಾಯಕ ಅಭಿವೃದ್ಧಿ ಅಧಿಕಾರಿ ಮತ್ತಿತರರು ಇರುತ್ತಾರೆ. ನಿಗಮವು ಚೈತನ್ಯ ಯೋಜನೆ ಅಡಿಯಲ್ಲಿ ಅ) ಚೈತನ್ಯ ಸಬ್ಸಿಡಿ ಕಂ ಮಾರ್ಜಿನ್ ಹಣ ಸಾಲ ಯೋಜನೆ, ಆ) ವಿದ್ಯಾರ್ಥಿಗಳಿಗಾಗಿ ಅರಿವು ಯೋಜನೆ, ಗಂಗಾಕಲ್ಯಾಣ ನೀರಾವರಿ ಯೋಜನೆ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ನೇರ ಸಾಲ ಯೋಜನೆಗಳು, ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ನೇರ

ಸಾಲ ಯೋಜನೆಗಳು ಮೊದಲಾದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಈ ನಿಗಮವು ಕಂಪನಿ ಕಾಯ್ದೆ ಅಡಿ ನೋಂದಣಿಯಾಗಿದ್ದು ವ್ಯವಸ್ಥಾಪಕ ನಿರ್ದೇಶಕ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ಲೋಕಾಯುಕ್ತ

ಪೊಲೀಸ್ ಇನ್‌ಸ್ಪೆಕ್ಟರ್ ಕಛೇರಿ, ಕರ್ನಾಟಕ ಲೋಕಾಯುಕ್ತ ಎಂಬ ಹೆಸರಲ್ಲಿ ೧೯೮೮ರಲ್ಲಿ ಪ್ರಾರಂಭಗೊಂಡ ಈ ಕಛೇರಿಯ ಹೆಸರು ೨೦೦೨ರಿಂದ ಪೊಲೀಸ್ ಅಧೀಕ್ಷಕರ ಕಛೇರಿ, ಕರ್ನಾಟಕ ಲೋಕಾಯುಕ್ತ ಎಂದು ಬದಲಾವಣೆಗೊಂಡಿರುತ್ತದೆ. ಕೋಲಾರ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಪೊಲೀಸ್ ಅಧೀಕ್ಷಕರು ಈ ಕಛೇರಿಯ ಮುಖ್ಯಸ್ಥರಾಗಿದ್ದಾರೆ. ಪೊಲೀಸ್ ಇನ್‌ಸ್ಪೆಕ್ಟರ್, ಮುಖ್ಯ ಪೇದೆ ಮೊದಲಾಗಿ ೮ ಜನ ಇತರ ಸಿಬ್ಬಂದಿ ಈ ಕಛೇರಿಯಲ್ಲಿದ್ದಾರೆ. ಲಂಚ ನಿರೋಧ ಕಾಯ್ದೆಯನ್ನು ಅನುಷ್ಠಾನ–ಗೊಳಿಸುವ ಮೂಲಕ ಸರ್ಕಾರಿ ಕಛೇರಿಗಳಲ್ಲಿನ ಕಾರ್ಯಚಟುವಟಿಕೆಗಳು ತ್ವರಿತವಾಗಿ ನಡೆಯುವಂತೆ ಮಾಡಿ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಣೆ ಮಾಡುವುದು ಮತ್ತು ಲೋಕಾಯುಕ್ತರ ಸೂಚನೆಗಳಂತೆ ಅಭಿವೃದ್ಧಿ ಚಟುವಟಿಕೆಗಳ ಪರಿಶೀಲನೆ ನಡೆಸುವುದು ಮತ್ತಿತರ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಪೊಲೀಸ್ ಮಹಾನಿರೀಕ್ಷಕ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಕರ್ನಾಟಕ ಸರ್ಕಾರ ವಿಮಾ ಇಲಾಖೆ

ಜಿಲ್ಲೆಯ ಎಲ್ಲಾ ಸರಕಾರಿ ನೌಕರರ ಜೀವ ವಿಮಾ ಪಾಲಿಸಿಗಳ ಕಾರ್ಯನಿರ್ವಹಣೆ, ಮರಣ, ಜನನ–ಹಕ್ಕು ಇತ್ಯರ್ಥ, ವಿಮಾ ತ್ಯಾಗ, ಮೌಲ್ಯ ಹಕ್ಕು ಪ್ರಕರಣಗಳ ಇತ್ಯರ್ಥ, ಸ್ವಯಂ ಆಡಳಿತ ಸಂಸ್ಥೆಗಳು ಹಾಗೂ ಅನುದಾನಿತ ಶಾಲೆಗಳ ನೌಕರರ ಕುಟುಂಬ ಕಲ್ಯಾಣ ನಿಧಿ ಲೆಕ್ಕ ನಿರ್ವಹಣೆ ಮುಂತಾದ ಧ್ಯೇಯೋದ್ದೇಶ ಹೊಂದಿದ ಜಿಲ್ಲಾ ವಿಮಾ ಅಧಿಕಾರಿ ಕಚೇರಿಯು ಕೋಲಾರದಲ್ಲಿ ೧೯೭೬ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಸಂಪೂರ್ಣ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ವಿಮಾಧಿಕಾರಿಯ ಕಛೇರಿಯಲ್ಲಿ ಮೂವರು ಅಧೀಕ್ಷಕರನ್ನೊಳಗೊಂಡಂತೆ ಒಟ್ಟು ೩೫ ಜನರ ಸಿಬ್ಬಂದಿ ವರ್ಗವಿದೆ. ಕರ್ನಾಟಕ ಸರಕಾರಿ ನೌಕರರ (ಕಡ್ಡಾಯ ಜೀವವಿಮಾ) ನಿಯಮಗಳು ೧೯೫೮ನ್ನು ಈ ಕಚೇರಿ ಅನ್ವಯಗೊಳಿಸುತ್ತದೆ. ಪಾಲಿಸಿಗಳ ಮೇಲೆ ಸಾಲ ಮಂಜೂರಿ, ಅವಧಿ ಪೂರೈಸಿದ ಪಾಲಿಸಿಗಳ ಇತ್ಯರ್ಥ, ಹೊಸ ಪಾಲಿಸಿಗಳನ್ನು ನೀಡುವುದು, ಪುರಸಭೆ ನೌಕರರ ಹಾಗೂ ಅನುದಾನಿತ ಸಂಸ್ಥೆಗಳ ಕುಟುಂಬ ಕಲ್ಯಾಣ ನಿಧಿ ಲೆಕ್ಕ ನಿರ್ವಹಣೆ ಹಾಗೂ ಮಂಜೂರಾತಿ ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಈ ಕಚೇರಿ ಕಾರ್ಯರೂಪಗೊಳಿಸುತ್ತದೆ. ತಾಲೂಕು ಮಟ್ಟದ ಕಚೇರಿಗಳನ್ನು ಇದು ಹೊಂದಿರುವುದಿಲ್ಲ. ಉಪ ನಿರ್ದೇಶಕರು, ಕರ್ನಾಟಕ ಸರ್ಕಾರ ಜೀವವಿಮಾ ಇಲಾಖೆ, ಬೆಂಗಳೂರು ಇವರು ಮೇಲಧಿಕಾರಿಯಾಗಿದ್ದಾರೆ.

### ಕಾರ್ಮಿಕ ಇಲಾಖೆ

ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸುವುದು, ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ನೊಂದ ಕಾರ್ಮಿಕರಿಗೆ, ಮೃತರ ವಾರಸುದಾರರಿಗೆ ಕಾನೂನು ರೀತ್ಯ ಕಾರ್ಮಿಕ ನಷ್ಟ ಪರಿಹಾರ ಕೊಡಿಸುವುದು ಮೊದಲಾದ ಧ್ಯೇಯೋದ್ದೇಶಗಳನ್ನು ಹೊಂದಿರುವ ಜಿಲ್ಲಾ ಕಾರ್ಮಿಕ ಅಧಿಕಾರಿ ಕಛೇರಿಯು ಕೋಲಾರದಲ್ಲಿ ೧೯೭೮ರಿಂದ ಪ್ರಾರಂಭವಾಗಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ಕಾರ್ಮಿಕ ಅಧಿಕಾರಿ ಅವರ ನೆರವಿಗೆ ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ/ ಬೆರಳಚ್ಚುಗಾರ ಮೊದಲಾದ ವಿವಿಧ ಹುದ್ದೆಯವರಿದ್ದಾರೆ. ಆಡಳಿತಾನುಕೂಲಕ್ಕಾಗಿ ಜಿಲ್ಲೆಯನ್ನು ಬಂಗಾರಪೇಟೆ ವೃತ್ತ, ಚಿಂತಾಮಣಿ ವೃತ್ತ, ಚಿಕ್ಕಬಳ್ಳಾಪುರ ವೃತ್ತ, ಶಿಡ್ಲಘಟ್ಟ ವೃತ್ತ, ಗೌರಿಬಿದನೂರು ವೃತ್ತ, ಕೋಲಾರ ವೃತ್ತ, ಕೆ.ಜಿ.ಎಫ್. ವೃತ್ತ, ಮುಳಬಾಗಿಲು ವೃತ್ತ ಹಾಗೂ ಮಾಲೂರು ವೃತ್ತಗಳಾಗಿ ವಿಭಾಗಿಸಿದ್ದು, ಕಾರ್ಮಿಕ ನಿರೀಕ್ಷಕರು ಆಯಾ ವೃತ್ತ ಕಛೇರಿಗಳ ಮುಖ್ಯಸ್ಥರಾಗಿರುತ್ತಾರೆ. ಔದ್ಯಮಿಕ ವಿವಾದ ಕಾಯ್ದೆ ೧೯೪೭ರ ಅಡಿ ಬರುವ ಪ್ರಕರಣಗಳ ವಿಲೇವಾರಿ, ಬಾಲ ಕಾರ್ಮಿಕ ಅನುಷ್ಠಾನ ಮೊದಲಾದ ಕಾರ್ಯಚಟುವಟಿಕೆಗಳನ್ನು ಹೊಂದಿರುವ ಈ ಇಲಾಖೆಯು ಕಾರ್ಖಾನೆಗಳ ಕಾಯ್ದೆ, ಕೈಗಾರಿಕಾ ಉದ್ದಿಮೆ, ತೋಟ

ಕಾರ್ಮಿಕರ ಕಾಯ್ದೆ, ಮೋಟಾರು ವಾಹನ ಕಾರ್ಮಿಕರ ಕಾಯ್ದೆ, ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ, ಅಂತರರಾಜ್ಯ ವಲಸೆ ಕಾರ್ಮಿಕರ ಕಾಯ್ದೆ, ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ ೧೯೨೩-ಮೊದಲಾದ ನಿಯಮ ಮತ್ತು ಅಧಿನಿಯಮಗಳನ್ನು ತನ್ನ ಕಛೇರಿ ಕಾರ್ಯದಲ್ಲಿ ಅಳವಡಿಸಿಕೊಂಡಿದೆ. ಸಹಾಯಕ ಕಾರ್ಮಿಕ ಆಯುಕ್ತ, ಬೆಂಗಳೂರು ವಿಭಾಗ ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಕಾನೂನುಮಾಪನಶಾಸ್ತ್ರ ಇಲಾಖೆ

ತೂಕ ಮತ್ತು ಅಳತೆಗಳಲ್ಲಿನ ನಿಖರತೆ ಕಾಪಾಡುವುದು, ಮೆಟ್ರಿಕ್ ಪದ್ಧತಿ ಜಾರಿಗೊಳಿಸುವುದು, ಗ್ರಾಹಕರ ಹಿತರಕ್ಷಣೆ ಮಾಡುವುದು ಮೊದಲಾದ ಧ್ಯೇಯೋದ್ದೇಶಗಳಿಗಾಗಿ ಕೋಲಾರದಲ್ಲಿ ಪ್ರಾರಂಭಿಸಲಾಗಿರುವ ಕಾನೂನುಮಾಪನಶಾಸ್ತ್ರ ಸಹಾಯಕ ನಿಯಂತ್ರಕರ ಕಛೇರಿಯು ಹಿಂದೆ ತೂಕ ಮತ್ತು ಅಳತೆ ಇಲಾಖೆ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಛೇರಿಯ ಮುಖ್ಯಸ್ಥರಾಗಿ ಸಹಾಯಕ ನಿಯಂತ್ರಕರಿದ್ದು, ಅವರ ನೆರವಿಗೆ ನಿರೀಕ್ಷಕ, ದೈಹಿಕ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ತೂಕ ಮತ್ತು ಅಳತೆ ಮಾಪನಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಮುದ್ರೆ ಹಾಕುವುದು, ಪೊಟ್ಟಣ ಸಾಮಗ್ರಿಗಳ ಮೇಲೆ ಕಾನೂನುಬದ್ಧವಾಗಿ ಇರಬೇಕಾದ ಘೋಷಣೆಗಳನ್ನು ಪರಿಶೀಲಿಸುವುದು, ಕಾನೂನು ಉಲ್ಲಂಘಿಸುವ ವರ್ತಕರ ವಿರುದ್ಧ ಮೊಕದ್ದಮೆ ಹೂಡಿ, ದಂಡ ವಿಧಿಸುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಈ ಸಂಬಂಧ ತನ್ನ ಕಛೇರಿ ವ್ಯವಹಾರದಲ್ಲಿ ಪ್ರಮಾಣಬದ್ಧ ತೂಕ ಮತ್ತು ಅಳತೆ ನಿಯಮ ೧೯೫೮, ಪ್ರಮಾಣ ಬದ್ಧ ತೂಕ ಮತ್ತು ಅಳತೆ ಪೊಟ್ಟಣ ಸಾಮಗ್ರಿ ನಿಯಮ ೧೯೭೭ ಮೊದಲಾದ ನಿಯಮ, ಅಧಿನಿಯಮಗಳನ್ನು ಅನುಸರಿಸುತ್ತದೆ.

ಈ ಕಛೇರಿಯ ಅಧೀನದಲ್ಲಿ ನಿರೀಕ್ಷಕರಿದ್ದು ಅವರ ಕಛೇರಿಗಳು ಕೋಲಾರ (ಕೋಲಾರ ಹಾಗೂ ಬಂಗಾರಪೇಟೆ ತಾಲೂಕುಗಳು), ಚಿಂತಾಮಣಿ (ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ ತಾಲೂಕುಗಳು) ಹಾಗೂ ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು) ತಾಲೂಕುಗಳಲ್ಲಿವೆ. ಇದಲ್ಲದೆ ಕೋಲಾರದಲ್ಲಿನ ಇನ್ನೊಂದು ನಿರೀಕ್ಷಕರ ಕಛೇರಿಯು ಮಾಲೂರು, ಶಿಡ್ಲಘಟ್ಟ ತಾಲೂಕುಗಳನ್ನಲ್ಲದೆ ಜಿಲ್ಲೆಯ ಆಟೋರಿಕ್ಷಾಗಳ ತಪಾಸಣೆ ಇತ್ಯಾದಿ ಕಾರ್ಯಗಳನ್ನು ನೋಡಿಕೊಳ್ಳುತ್ತದೆ. ಉಪನಿಯಂತ್ರಕ, ಬೆಂಗಳೂರು ವಿಭಾಗ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಕೃಷಿ ಮಾರುಕಟ್ಟೆ ಇಲಾಖೆ

ಜಿಲ್ಲೆಯಲ್ಲಿ ಕೃಷಿ ಉತ್ಪನ್ನ (ನಿಯಂತ್ರಣ) ಮಾರಾಟ ಶಾಸನ ೧೯೬೬ನ್ನು ಜಾರಿಗೊಳಿಸುವುದು, ಜಿಲ್ಲೆಯ ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆವಕ, ಜಾವಕವಾಗುವ ಕೃಷಿ ಹುಟ್ಟುವಳಿಗಳನ್ನು ನಿಯಂತ್ರಿಸುವುದು ಮೊದಲಾದ ಧ್ಯೇಯೋದ್ದೇಶಗಳಿಂದ ಕೋಲಾರದಲ್ಲಿ ಜಿಲ್ಲಾ ಮಾರುಕಟ್ಟೆ ಅಧಿಕಾರಿ ಕಛೇರಿಯನ್ನು ೧೯೬೭ರಲ್ಲಿ ಪ್ರಾರಂಭಿಸಲಾಯಿತು. ೧೯೮೬-೮೭ರಲ್ಲಿ ಈ ಕಛೇರಿಯ ಮುಖ್ಯಸ್ಥರ ಹುದ್ದೆಯನ್ನು ಕೃಷಿ ಮಾರಾಟ ಸಹಾಯಕ ನಿರ್ದೇಶಕ ಎಂದು ಬದಲಿಸಲಾಗಿದೆ. ಕೋಲಾರ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ ಹಾಗೂ ಮಾಲೂರುಗಳಲ್ಲಿ ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು ಕಾರ್ಯದರ್ಶಿಗಳು ಅವುಗಳ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಮಾರಾಟ ಸೌಲಭ್ಯ ಒದಗಿಸುವುದು ಮತ್ತಿತರ ಕಾರ್ಯಗಳನ್ನು ಈ ಕಛೇರಿಗಳು ನಿರ್ವಹಿಸುತ್ತವೆ. ಕೃಷಿ ಮಾರಾಟ ನಿರ್ದೇಶಕರು, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಖಜಾನೆ ಇಲಾಖೆ

ರಾಜ್ಯದ ಪುನರ್ ರಚನೆಗೆ ಮೊದಲು ಖಜಾನೆ ವ್ಯವಹಾರವು ಆಯಾ ಜಿಲ್ಲಾಧಿಕಾರಿಯ ನಿಯಂತ್ರಣದಲ್ಲಿದ್ದಿತು. ೧೯೬೫ರಲ್ಲಿ ಖಜಾನೆ ನಿರ್ದೇಶನಾಲಯವು ಅಸ್ತಿತ್ವಕ್ಕೆ ಬಂದ ಬಳಿಕ, ಕೋಲಾರದಲ್ಲಿಯೂ ಜಿಲ್ಲಾ ಖಜಾನೆ ಕಛೇರಿಯು ಪ್ರತ್ಯೇಕವಾಯಿತು. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಜಿಲ್ಲಾ ಖಜಾನೆ ಅಧಿಕಾರಿ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಮುಖ್ಯ ಲೆಕ್ಕಿಗರು, ಪ್ರಥಮ ದರ್ಜೆ ಸಹಾಯಕರು, ಸಹಾಯಕ ಖಜಾನಾಧಿಕಾರಿಗಳು ಮೊದಲಾಗಿ ೪೧ ಜನ

ಇತರ ಸಿಬ್ಬಂದಿ ಇದ್ದಾರೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಉಪಖಜಾನೆಗಳು ಇದ್ದು ಉಪ ಖಜಾನಾಧಿಕಾರಿಗಳ ಅಧೀನದಲ್ಲಿ ಅವು ಕಾರ್ಯನಿರ್ವಹಿಸುತ್ತವೆ. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಸರಕಾರಿ ಹಾಗೂ ಅರೆ ಸರಕಾರಿ, ಅನುದಾನಿತ ಸಂಸ್ಥೆಗಳ ವೇತನ ಮತ್ತಿತರ ಬಿಲ್ಲುಗಳನ್ನು ಗಣಕೀಕರಣದ ಮೂಲಕ ನಿಯಮಾನುಸಾರವಾಗಿ ತೀರ್ಣಗೊಳಿಸಿ ಚೆಕ್ಕುಗಳನ್ನು ವಿತರಿಸುವುದು, ತ್ರಿವಿಧ ಮಾಸಾಶನದಾರರಿಗೆ ಎಂ.ಓ.ರವಾನಿಸುವುದು, ಪಿಂಚಣಿದಾರರಿಗೆ ನಿಯಮಗಳನ್ವಯ ಚೆಕ್ಕುಗಳನ್ನು ವಿತರಿಸುವುದು ಮತ್ತಿತರ ಕಾರ್ಯಗಳು ಈ ಕಛೇರಿಯದಾಗಿವೆ. ಕರ್ನಾಟಕ ಆರ್ಥಿಕ ಸಂಹಿತೆ ಹಾಗೂ ಕರ್ನಾಟಕ ಖಜಾನೆ ಸಂಹಿತೆ ಮತ್ತಿತರ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯದಲ್ಲಿ ಅಳವಡಿಸಿಕೊಂಡಿದೆ. ನಿರ್ದೇಶಕ, ಖಜಾನೆ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಮಹಾತ್ಮ ಗಾಂಧೀ ಅವರ ಆಶಯದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಗುವ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಗುಡಿಕೈಗಾರಿಕೆಗಳನ್ನು ಬೆಳೆಸಿ, ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸುವುದು, ಆರ್ಥಿಕ ಸ್ವಾವಲಂಬನೆ ಹೊಂದಲು ಗ್ರಾಮೀಣರನ್ನು ಪ್ರೇರೇಪಿಸಿ ಪ್ರೋತ್ಸಾಹಿಸುವುದು ಈ ಮಂಡಲಿಗಳ ಸ್ಥಾಪನೆಯ ಮೂಲೋದ್ದೇಶವಾಗಿದೆ. ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಜಿಲ್ಲಾ ಕಛೇರಿಯು ೧೯೫೭ರಲ್ಲಿ ಕೋಲಾರದಲ್ಲಿ ಪ್ರಾರಂಭವಾಯಿತು. ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಅಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದಾರೆ. ಇವರಿಗೆ ಸಹಾಯಕರಾಗಿ ಅಧೀಕ್ಷಕ ಹಾಗೂ ವಸೂಲಾತಿ ಅಧಿಕಾರಿ ಸೇರಿದಂತೆ ಒಂಭತ್ತು ಮಂದಿ ಇತರ ಸಿಬ್ಬಂದಿ ಇದ್ದಾರೆ. ಜಿಲ್ಲೆಯಲ್ಲಿ ಸುಣ್ಣದ ಉತ್ಪಾದನೆ, ಕುಂಬಾರಿಕೆ, ವಿಗ್ರಹಗಳ ಕೆತ್ತನೆ ಮೊದಲಾದ ವಿವಿಧ ಗ್ರಾಮೋದ್ಯೋಗಗಳು, ಕೈಕಾಗದ ತಯಾರಿಕೆ, ಗೃಹ ಬೆಂಕಿಕಡ್ಡಿ ತಯಾರಿಕೆ, ಬೆಲ್ಲ, ಬೇಕರಿ ಉತ್ಪನ್ನ, ಗೋಡಂಬಿ ಪರಿಷ್ಕರಣೆ ಮೊದಲಾದ ಅರಣ್ಯಾಧಾರಿತ ಮತ್ತು ವ್ಯವಸಾಯಾಧಾರಿತ ಕೈಗಾರಿಕೆಗಳು, ಅರಳೆ, ರೇಷ್ಮೆ ಪಾಲಿ, ಉಣ್ಣೆ ಮಸ್ಲಿನ್, ಖಾದಿ ವಸ್ತ್ರೋದ್ಯಮ ಮೊದಲಾದ ಉದ್ದಿಮೆಗಳನ್ನು ಅಭಿವೃದ್ಧಿಪಡಿಸುವುದು, ಅದಕ್ಕಾಗಿ ಅಗತ್ಯವಾದ ಸಾಲ, ಸಹಾಯ ಧನ ಹಾಗೂ ತಾಂತ್ರಿಕ ನೆರವನ್ನು ಒದಗಿಸುವುದು, ಆ ಮೂಲಕ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಮುಂದಾಗುವುದು ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ಮಂಡಲಿಯು ಕರ್ನಾಟಕ ನಾಗರಿಕ ಸೇವಾ ನಿಯಮಗಳು ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಮುಂಬೈ–ಇದರ ನಿಯಮಗಳನ್ನು ತನ್ನ ಕಛೇರಿ ಕೆಲಸಗಳಲ್ಲಿ ಅನುಸರಿಸುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ, ಬೆಂಗಳೂರು ಅವರು ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಪ್ರಮುಖ ಖನಿಜಗಳ ರಾಜಧನ ವಸೂಲಿ, ಖನಿಜ, ಉಪಖನಿಜಗಳ ರವಾನೆಗೆ ಪರವಾನಿಗೆ ನೀಡುವುದು ಮೊದಲಾದ ಕಾರ್ಯಗಳ ನಿರ್ವಹಣೆಯ ಉದ್ದೇಶದಿಂದ ಕೋಲಾರದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಖನಿಜ ವಿಭಾಗದ ಕಛೇರಿಯು ೧೯೮೦ರಿಂದ ಪ್ರಾರಂಭವಾಗಿದೆ. ಹಿರಿಯ ಭೂ ವಿಜ್ಞಾನಿ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ೨೦೦೧ಕ್ಕೆ ಮೊದಲು ಆ ಹುದ್ದೆಯ ಹೆಸರು ಭೂವಿಜ್ಞಾನಿ ಎಂದು ಇದ್ದಿತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯಲ್ಲಿ ಭೂ ವಿಜ್ಞಾನಿ, ಕಿರಿಯ ಅಭಿಯಂತರ, ಸಹಾಯಕ ಕೊರೆಯುವ ಅಭಿಯಂತರ, ಸಹಾಯಕ ಬೈರಿಗೆದಾರ ಮೊದಲಾಗಿ ೧೦ ಮಂದಿ ಇತರ ಸಿಬ್ಬಂದಿ ಇದ್ದಾರೆ. ವಿಶಿಷ್ಟವಲ್ಲದ ಉಪಖನಿಜಗಳಿಗೆ ಗುತ್ತಿಗೆ ಮಂಜೂರಾತಿ, ಮುಖ್ಯ ಖನಿಜಗಳ ರಾಜ ಧನ ವಸೂಲಿ, ಅನಧಿಕೃತ ಖನಿಜ/ಉಪಖನಿಜಗಳ ರವಾನೆಗೆ ದಂಡ ವಿಧಿಸುವುದು, ಕೊಳವೆಬಾವಿಗಳಲ್ಲಿ ನೀರು ಇಳುವರಿ ಪರೀಕ್ಷೆ ಮಾಡುವುದು ಹಾಗೂ ಪ್ರಮಾಣ ಪತ್ರ ನೀಡುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ ೧೯೯೪ ಮೊದಲಾದ ಕಾಯಿದೆ, ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ. ಜಂಟಿ ನಿರ್ದೇಶಕ, ದಕ್ಷಿಣ ವಲಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ,ಮೈಸೂರು ಅವರು ಮೇಲಧಿಕಾರಿಯಾಗಿದ್ದಾರೆ.

## ಗೃಹರಕ್ಷಕ ಮತ್ತು ಪೌರ ರಕ್ಷಣಾ ನಿರ್ದೇಶನಾಲಯ

ಪ್ರಾಕೃತಿಕ ಹಾಗೂ ಮಾನವ ಸಂಬಂಧಿತ ಆಪತ್ತುಗಳ ಸಂದರ್ಭಗಳಲ್ಲಿ ಜನ ಸಮುದಾಯದ ಸೇವೆ ಕೈಗೊಳ್ಳುವುದರ ಜೊತೆಗೆ ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಪೊಲೀಸರೊಂದಿಗೆ ಸಹಕರಿಸುವ ಗೃಹರಕ್ಷಕದಳವು ೧೯೬೪ರಲ್ಲಿ ಕೋಲಾರದಲ್ಲಿ ಜಿಲ್ಲಾ ಕಚೇರಿಯನ್ನು ಪ್ರಾರಂಭಿಸಿತು. ಜಿಲ್ಲಾ ಸಮಾವೇಷ್ಟರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಕೋಲಾರ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರವನ್ನು ಹೊಂದಿರುತ್ತಾರೆ. ಅವರ ಈ ಹುದ್ದೆಯು ಒಂದು ಗೌರವದ ಹುದ್ದೆಯಾಗಿದೆ. ಇವರ ನೆರವಿಗೆ ೧೦ ಜನ ವಿವಿಧ ಸಿಬ್ಬಂದಿ ಇದ್ದಾರೆ. ತಾಲೂಕುಗಳಲ್ಲಿ ತಾಲೂಕು ಮಟ್ಟದ ಘಟಕಾಧಿಕಾರಿಗಳಿದ್ದು, ಅವರ ನೆರವಿಗೆ ಅರೆಕಾಲಿಕ ಬೋಧಕರು ಮತ್ತಿತರ ಸಿಬ್ಬಂದಿ ಇದ್ದಾರೆ. ಗೃಹರಕ್ಷಕ ಕಾಯ್ದೆ ೧೯೬೨, ಗೃಹರಕ್ಷಕ ನಿಯಮ ೧೯೬೩ ಹಾಗೂ ಗೃಹರಕ್ಷಕ ಕೈಪಿಡಿ ೧೯೮೨– ಇವುಗಳನ್ನು ಕಚೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನ್ವಯಗೊಳಿಸುತ್ತಿದೆ.

ಗೃಹರಕ್ಷಕದಳವು ಒಂದು ಸ್ವಯಂಸೇವಾ ಸಂಸ್ಥೆಯಾಗಿ ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಅಸ್ತಿತ್ವಕ್ಕೆ ಬಂದಿತು. ವಿಮಾನ ದಾಳಿ ಮತ್ತಿತರ ಆಕಸ್ಮಿಕಗಳಲ್ಲಿ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿಗಳ ರಕ್ಷಣೆಯ ಜವಾಬ್ದಾರಿ ಇದರದಾಗಿದ್ದಿತು. ಕ್ರಮೇಣ ಇದರ ಕಾರ್ಯ ವ್ಯಾಪ್ತಿ ವಿಸ್ತೃತಗೊಂಡಿತು. ಜಾತ್ರೆ ಹಬ್ಬ ಮೊದಲಾದ ಸಂದರ್ಭಗಳಲ್ಲಿ ಶಿಸ್ತುಪಾಲನೆ, ಅಗ್ನಿ ಆಕಸ್ಮಿಕ, ಪ್ರವಾಹ ಮತ್ತಿತರ ಸಂದರ್ಭಗಳಲ್ಲಿ ಈ ದಳವು ಪೊಲೀಸರೊಂದಿಗೆ ಸಹಕರಿಸುತ್ತಿದೆ. ಚುನಾವಣಾ ಕಾರ್ಯಗಳಲ್ಲಿ ಸಹ ಇದು ಸಕ್ರಿಯವಾಗಿ ಭಾಗವಹಿಸುತ್ತಿದೆ. ಮಹಿಳಾ ಗೃಹರಕ್ಷಕಿಯರ ತುಕಡಿಯನ್ನು ಪ್ರಾರಂಭಿಸುವ ಯೋಜನೆಯಲ್ಲದೆ, ಫೈರಿಂಗ್ ತರಬೇತಿ, ರಕ್ತದಾನ ಶಿಬಿರ, ಅರಣ್ಯ ಇಲಾಖೆ ವತಿಯಿಂದ ಸಸಿ ನೆಡುವ ಕಾರ್ಯಕ್ರಮ, ರೋಗಿಗಳ ರಕ್ಷಣಾ ಕಾರ್ಯದಲ್ಲಿ ಪಾಲ್ಗೊಳ್ಳುವುದು, ಸಾರ್ವಜನಿಕ ಹಾಗೂ ಸರ್ಕಾರಿ ಕಟ್ಟಡಗಳ ಪಹರೆ ಕಾರ್ಯನಿರ್ವಹಣೆ ಇತ್ಯಾದಿಗಳನ್ನು ಅಳವಡಿಸಿಕೊಳ್ಳುವ ಯೋಜನೆಗಳನ್ನು ಈ ನಿರ್ದೇಶನಾಲಯ ಹಾಕಿಕೊಂಡಿದೆ. ಆರಕ್ಷಕ ಮಹಾನಿರ್ದೇಶಕರು ಹಾಗೂ ಗೃಹರಕ್ಷಕ ದಳದ ಮಹಾ ಸಮಾವೇಷ್ಟರು, ನಿರ್ದೇಶಕರು, ಅಗ್ನಿ ಶಾಮಕ ಸೇವೆಗಳು ಮತ್ತು ನಿರ್ದೇಶಕ, ಪೌರ ರಕ್ಷಣೆ, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಮೇಲಧಿಕಾರಿಗಳಾಗಿರುತ್ತಾರೆ.

## ಗ್ರಾಹಕರ ವೇದಿಕೆ

ಗ್ರಾಹಕರ ಸಂರಕ್ಷಣಾ ಅಧಿನಿಯಮ ೧೯೮೬ ಮತ್ತು ನಿಯಮಗಳ ಮೇರೆಗೆ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆಯು ಕೋಲಾರದಲ್ಲಿ ೧೯೯೨ರಲ್ಲಿ ಪ್ರಾರಂಭಗೊಂಡಿತು. ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವೇದಿಕೆಯ ಮುಖ್ಯಸ್ಥರಾಗಿದ್ದು, ಸಹಾಯಕ ನೋಂದಣಿ ಹಾಗೂ ಸಹಾಯಕ ಆಡಳಿತಾಧಿಕಾರಿ, ಅಧೀಕ್ಷಕ ಸೇರಿದಂತೆ ೧೦ ಜನ ಇತರ ಸಿಬ್ಬಂದಿ ಇವರ ನೆರವಿಗಿದ್ದಾರೆ. ವೇದಿಕೆಗೆ ನೇಮಕಗೊಳ್ಳುವ ಇಬ್ಬರು ಸದಸ್ಯರು ಗ್ರಾಹಕರ ದೂರು ಪರಿಶೀಲಿಸುವಲ್ಲಿ ಅಧ್ಯಕ್ಷರಿಗೆ ನೆರವು ನೀಡುತ್ತಾರೆ. ಜಿಲ್ಲೆಯ ಗ್ರಾಹಕರ ದೂರುಗಳಿಗೆ ಪರಿಹಾರ ಒದಗಿಸಬಲ್ಲ ಕಚೇರಿ ಇದಾಗಿದ್ದು ತಾಲೂಕು ಮಟ್ಟದಲ್ಲಿ ಯಾವುದೇ ವೇದಿಕೆ ಇರುವುದಿಲ್ಲ. ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಬೆಂಗಳೂರು– ಇವರು ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಜಲಾನಯನ ಅಭಿವೃದ್ಧಿ ಇಲಾಖೆ

ಜನತೆಯ ಸಹಭಾಗಿತ್ವದೊಂದಿಗೆ ಜಿಲ್ಲೆಯ ಒಣಭೂಮಿಯಲ್ಲಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಮಳೆನೀರನ್ನು ಸಂರಕ್ಷಿಸುವುದು, ಮೇಲ್ಮಣ್ಣು ಕೊಚ್ಚುವುದನ್ನು ಹಾಗೂ ಕೆರೆ, ಕುಂಟೆಗಳಲ್ಲಿ ಹೂಳು ತುಂಬುವುದನ್ನು ತಡೆದು ಅಂತರ್ಜಲ ಹೆಚ್ಚಿಸುವುದು, ಆ ಮೂಲಕ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ವಿಸ್ತರಿಸುವುದಲ್ಲದೆ ರೈತರ ತಲಾದಾಯವೂ ಹೆಚ್ಚುವಂತೆ ಮಾಡುವುದೇ ಮೊದಲಾದ ಉದ್ದೇಶಗಳಿಂದ ಕೋಲಾರದಲ್ಲಿ ೨೦೦೦–೦೧ರಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಲಾಗಿದೆ. ಆ ಮೊದಲು ಈ ಕೆಲಸಗಳನ್ನು ಜಲಾನಯನ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ (DLDB) ನಿರ್ವಹಿಸಲಾಗುತ್ತಿದ್ದಿತು. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರಿಗೆ ಸಹಾಯಕರಾಗಿ ಆಡಳಿತ ಸಹಾಯಕ, ಅಧೀಕ್ಷಕ, ಸಹಾಯಕ

ನಕ್ಷೆಗಾರರು-ರೇಖಾಗಾರರು ಮೊದಲಾದ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಇಲ್ಲವೇ ಇತರ ಹಂತಗಳ ಕಛೇರಿಗಳಲ್ಲಿ ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ತೋಟಗಾರಿಕಾ ನಿರ್ದೇಶಕರು, ವಲಯ ಅರಣ್ಯ ಅಧಿಕಾರಿಗಳು ಮೊದಲಾದ ಅಧಿಕಾರಿ ಮತ್ತು ಸಿಬ್ಬಂದಿ ಇದ್ದಾರೆ. ಇದಲ್ಲದೆ ಸುಜಲ ಜಲಾನಯನ ಯೋಜನೆ ಅಡಿಯಲ್ಲಿ ಸಹಾಯಕ ಕೃಷಿ ನಿರ್ದೇಶಕ, ಕೃಷಿ ಅಧಿಕಾರಿ, ಪಶುವೈದ್ಯಾಧಿಕಾರಿ, ವಲಯ ಅರಣ್ಯಾಧಿಕಾರಿ ಮೊದಲಾದವರು ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ಡಿ.ಪಿ.ಎ.ಪಿ., ಐ.ಡಬ್ಲ್ಯೂ. ಡಿ.ಪಿ., ಪಿ.ಎಂ.ಜಿ.ವೈ., ಸುಜಲ, ನಬಾರ್ಡ್ ಮೊದಲಾದ ಯೋಜನೆಗಳಂತೆ ಜಿಲ್ಲೆಯಲ್ಲಿನ ಸುಮಾರು ೫೦೦ ಹೆಕ್ಟೇರ್ ಒಣ ಭೂಮಿಯನ್ನು ಕಿರು ಜಲಾನಯನಗಳನ್ನಾಗಿ ವಿಂಗಡಿಸಿ ಬದುಗಳ ನಿರ್ಮಾಣ, ತಡೆಅಣೆ, ಜಿನುಗುಕೆರೆ, ಕೃಷಿಹೊಂಡ ಮುಂತಾದವುಗಳ ನಿರ್ಮಾಣ ಮಾಡುವುದು, ಅರಣ್ಯ ಘಟಕದಿಂದ ಗೋಮಾಳ, ಗುಂಡುತೋಪು, ಬದುಗಳ ಮೇಲೆ ರೈತರ ಬಳಕೆಗಾಗುವ ಹೊಂಗೆ, ಬೇವು ಮೊದಲಾದ ಜಾತಿಯ ಸಸಿಗಳನ್ನು ನೆಡುವುದು, ತೋಟಗಾರಿಕಾ ಘಟಕದಿಂದ ಮಾವು, ಸಪೋಟದಂತಹ ಸಸಿಗಳನ್ನು ಬೆಳೆಸಿ ರೈತರ ತಲಾದಾಯ ಹೆಚ್ಚಿಸುವುದು ಮೊದಲಾದ ಕಾರ್ಯಗಳನ್ನು ಈ ಇಲಾಖೆ ನಡೆಸುತ್ತಿದೆ. ಕೆ.ಸಿ.ಎಸ್.ಆರ್., ಕೃಷಿ, ಅರಣ್ಯ ಮತ್ತು ತೋಟಗಾರಿಕಾ ಇಲಾಖೆಗಳ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕೆಲಸಗಳಲ್ಲಿ ಪಾಲಿಸುತ್ತದೆ. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

### ಜಿಲ್ಲಾ ತರಬೇತಿ ಸಂಸ್ಥೆ

ಗ್ರಾಮ ಲೆಕ್ಕಿಗರ ಪಂಚಾಯತ್ ಸಮಿತಿ ತರಬೇತಿ ಕೇಂದ್ರದ ಹೆಸರಿನಲ್ಲಿ ೧೯೭೭ರಲ್ಲಿ ಕೋಲಾರದಲ್ಲಿ ಪ್ರಾರಂಭವಾದ ಈ ಕಛೇರಿಯು ೧೯೮೧ರಿಂದ ಜಿಲ್ಲಾ ವಿಸ್ತರಣಾ ತರಬೇತಿ ಕೇಂದ್ರ ಎಂದು ಬದಲಾವಣೆ ಗೊಂಡಿರುತ್ತದೆ. ಪ್ರಾಚಾರ್ಯರು ಈ ಕಛೇರಿಯ ಮುಖ್ಯ ಅಧಿಕಾರಿಯಾಗಿದ್ದು, ಉಪ ಪ್ರಾಚಾರ್ಯರು, ಬೋಧಕರು ಮೊದಲಾದ ಇತರ ೧೦ ಜನ ಸಿಬ್ಬಂದಿ ಇವರ ಅಧೀನದಲ್ಲಿದ್ದಾರೆ. ಜಿಲ್ಲೆಯ ವಿವಿಧ ಇಲಾಖೆಗಳ 'ಸಿ' ಮತ್ತು 'ಡಿ' ಗುಂಪಿನ ನೌಕರರಿಗೆ ಆಡಳಿತ, ಆರ್ಥಿಕ ಸೇವಾ ವಿಷಯಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ತರಬೇತಿ ನೀಡುವುದು ಈ ಕಛೇರಿಯ ಪ್ರಮುಖ ಕಾರ್ಯೋದ್ದೇಶವಾಗಿದೆ. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಜಿಲ್ಲಾ ನಿರ್ಮಿತಿ ಕೇಂದ್ರ

ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿಕೊಂಡು, ಪರಿಸರ ಹಿತಕ್ಕೆ ಧಕ್ಕೆಯಾಗದಂತಹ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಜನಸಾಮಾನ್ಯರಿಗೂ ನಿಲುಕುವ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸುವ ಉದ್ದೇಶದಿಂದ ೧೯೮೮ರಲ್ಲಿ ಈ ಸಂಸ್ಥೆಯನ್ನು ಕೋಲಾರದಲ್ಲಿ ಸ್ಥಾಪಿಸಲಾಗಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಛೇರಿಯ ಮುಖ್ಯಸ್ಥರಾಗಿ ಯೋಜನಾ ವ್ಯವಸ್ಥಾಪಕರಿದ್ದು, ಅವರಿಗೆ ಸಹಾಯಕರಾಗಿ ಯೋಜನಾ ಅಭಿಯಂತರ, ಕಿರಿಯ ಅಭಿಯಂತರ ಮೊದಲಾದ ೧೨ ಜನ ಸಿಬ್ಬಂದಿ ಇದ್ದಾರೆ. ಈ ನಿರ್ಮಿತಿ ಕೇಂದ್ರದ ಮೂಲಕ ಗೃಹ ನಿರ್ಮಾಣ ಮಾಡಬಯಸುವ ಸಾರ್ವಜನಿಕರಿಗೆ ಪ್ರಸಕ್ತ ಮಾರುಕಟ್ಟೆ ದರದ ಅನ್ವಯ ಮನೆಯ ಯೋಜನೆ, ವಿನ್ಯಾಸ ಮತ್ತು ನಿರ್ಮಾಣಗಳ ವೆಚ್ಚವನ್ನು ನಿರ್ಧರಿಸಿಕೊಡುವುದು, ಮನೆಯ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಮಂಜೂರು ಮಾಡಿಕೊಡುವುದು, ನಿಗದಿತ ದರದ ಪ್ರಕಾರ ಗೃಹ ನಿರ್ಮಾಣದ ಮೇಲ್ವಿಚಾರಣೆ ಒಪ್ಪಿಕೊಳ್ಳುವುದು ಮೊದಲಾದ ಕಾರ್ಯಗಳನ್ನು ಈ ಸಂಸ್ಥೆ ಕೈಗೊಳ್ಳುತ್ತದೆ. ಮಾಹಿತಿ ಸಿಂಧೂ ಯೋಜನೆಯಡಿ ಶಾಲೆಗಳ ಪ್ರಯೋಗಶಾಲೆಗಳು, ನಗರ ಪ್ರದೇಶದಲ್ಲಿ ಶಾಲಾ ಕಟ್ಟಡಗಳು, ರೈತ ಸಂಪರ್ಕ ಕೇಂದ್ರಗಳು, ಡಿಡಿಪಿಐ ಕಛೇರಿ ಕಟ್ಟಡ ಮೊದಲಾದವುಗಳನ್ನು ಈ ಕೇಂದ್ರವು ನಿರ್ಮಿಸಿದೆ. ೧೯೬೦ರ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮಗಳನ್ನು ಈ ಕಛೇರಿ ತನ್ನ ಕಛೇರಿ ಕಾರ್ಯದಲ್ಲಿ ಅನ್ವಯಿಸಿಕೊಳ್ಳುತ್ತಿದ್ದು, ಸಂಸ್ಥೆಯ ಪದನಿಮಿತ್ತ ಅಧ್ಯಕ್ಷರಾದ ಜಿಲ್ಲಾಧಿಕಾರಿ ಅವರು ತತ್ಕ್ಷಣದ ಮೇಲಧಿಕಾರಿಯಾಗಿದ್ದಾರೆ.

### ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)

ಜಿಲ್ಲೆಯ ಶೈಕ್ಷಣಿಕ ಪ್ರಗತಿ ಹಾಗೂ ತರಬೇತಿಗಳ ಅನುಪಾಲನಾ ಕಾರ್ಯಗಳ ನಿರ್ವಹಣೆಯ ಉದ್ದೇಶದಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು ೧೯೯೩ರಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾಂಶುಪಾಲ ಹಾಗೂ ಪದನಿಮಿತ್ತ

ಉಪನಿರ್ದೇಶಕ (ಅಭಿವೃದ್ಧಿ) ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಹಿರಿಯ ಉಪನ್ಯಾಸಕರು– ಏಳು ಜನ, ಉಪನ್ಯಾಸಕರು–೧೭ ಜನ, ಅಧೀಕ್ಷಕರು–ಇಬ್ಬರು – ಹೀಗೆ ಒಟ್ಟು ೪೮ ಜನ ಇತರ ಸಿಬ್ಬಂದಿ ಇದ್ದಾರೆ. ಕೋಲಾರ ಜಿಲ್ಲೆಯ ಎಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು (ಡಿ.ಎಡ್ಸ್.) ಹಾಗೂ ಜಿಲ್ಲೆಯ ಶೈಕ್ಷಣಿಕ ಸಮಗ್ರ ಪ್ರಗತಿಯ ವ್ಯಾಪ್ತಿ (ಬಿಆರ್‌ಸಿ, ಸಿಆರ್‌ಸಿ) ಮೇಲ್ವಿಚಾರಣೆ ಈ ಕಛೇರಿಯದಾಗಿದೆ. ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಇವರ ಅಧೀನದಲ್ಲಿ ಬರುತ್ತವೆ. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ತೋಟಗಾರಿಕೆ ಇಲಾಖೆ

ಹಣ್ಣು, ತರಕಾರಿ ಮತ್ತಿತರ ತೋಟಗಾರಿಕಾ ಬೆಳೆಗಳನ್ನು ಬೆಳೆಸುವ ಬಗ್ಗೆ ಆಸಕ್ತ ಸಾರ್ವಜನಿಕರಿಗೆ ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವು ನೀಡುವುದು, ಜಿಲ್ಲೆಯಲ್ಲಿನ ತೋಟಗಾರಿಕೆ ಕ್ಷೇತ್ರ ಹಾಗೂ ಸಸಿಕ್ಷೇತ್ರಗಳಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡಗಳ ಉತ್ತಮ ಗುಣಮಟ್ಟದ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಮಾರಾಟ ಮಾಡುವುದು ಮತ್ತಿತರ ಉದ್ದೇಶಗಳಿಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯು ೧೯೯೧ರಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೭೧ರಲ್ಲಿ ಈ ಕಛೇರಿಯು ಹಿರಿಯ ಸಹಾಯಕ ನಿರ್ದೇಶಕರು, ಕೃ.ಪು.ಸಂ.(ದ್ರಾಕ್ಷಿ) ಎಂಬ ಹೆಸರಿನಲ್ಲಿ ಪ್ರಾರಂಭವಾಗಿದ್ದಿತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ನಾಲ್ಕು ಜನ ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬ ಪ್ರಥಮದರ್ಜೆ ಸಹಾಯಕ, ೭೮ ಜನ ತೋಟಗಾರರು ಸೇರಿ ಒಟ್ಟು ೬೦ ಜನ ಇತರ ಸಿಬ್ಬಂದಿ ಇದ್ದಾರೆ.

ಕ್ಷೇತ್ರ ಹಾಗೂ ಸಸ್ಯಾಗಾರಗಳಲ್ಲಿ ಮೂಲಭೂತ ಸೌಕರ್ಯಾಭಿವೃದ್ಧಿ ಮಾಡುವುದು, ವಿಸ್ತರಣೆ ಮತ್ತು ತರಬೇತಿ ಯೋಜನೆ ಅಡಿಯಲ್ಲಿ ರೈತ ಮಕ್ಕಳಿಗೆ ೧೦ ತಿಂಗಳು ತರಬೇತಿ ನೀಡುವುದು, ವಿಸ್ತರಣೆ ಮತ್ತು ಪ್ರಚಾರ ಕಾರ್ಯಕ್ರಮದಡಿ ಫಲಪುಷ್ಪ ಪ್ರದರ್ಶನ ಏರ್ಪಡಿಸುವುದು, ಕಛೇರಿ ಕಟ್ಟಡಗಳ ನಿರ್ವಹಣೆ ಮೊದಲಾದ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಹಲಸು ತಳಿ ಅಭಿವೃದ್ಧಿ ಕ್ಷೇತ್ರ, ಟಮಕ ಹಾಗೂ ಜೋಡಿ ವಮ್ಮಸಂದ್ರ, ಮುಳಬಾಗಿಲು, ಹೊಗಳಗೆರೆ, ಶ್ರೀನಿವಾಸಪುರ, ಚಿಂತಾಮಣಿ, ಮಾದಿಕೆರೆ, ಶಿಡ್ಲಘಟ್ಟ, ಚಿಕ್ಕದಾಸರಹಳ್ಳಿ, ಮಿಣಕನಗುರ್ಕಿ, ಪಸಪಲೋಡು, ದೊಡ್ಡಶಿವಾರಗಳಲ್ಲಿನ ಸಸ್ಯಾಗಾರ ಅಥವಾ ತೋಟಗಾರಿಕಾ ಕ್ಷೇತ್ರಗಳು ಈ ಕಛೇರಿಯ ನಿರ್ದೇಶನದಂತೆ ಕಾರ್ಯನಿರ್ವಹಿಸುತ್ತವೆ. ತೋಟಗಾರಿಕೆ ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗ, ಲಾಲ್‌ಬಾಗ್ ಅವರು ಮೇಲಧಿಕಾರಿಯಾಗಿರುತ್ತಾರೆ.

## ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆ

ರಾಜಸ್ವ ಸಚಿವಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ೧೯೬೪ರಿಂದ ಸ್ವತಂತ್ರ ಇಲಾಖೆಯಾಗಿದೆ. ಹಿಂದೆ, ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ವ್ಯಾಪ್ತಿಯ ಅಧಿಕಾರಿಗಳಾದ ಡೆಪ್ಯುಟಿ ಕಮೀಷನರ್‌ರವರು ಜಿಲ್ಲಾ ರಿಜಿಸ್ಟ್ರಾರ್ ಎಂಬ ಪದನಾಮದಿಂದ ಕಾರ್ಯನಿರ್ವಹಿಸುತ್ತಿದ್ದರು. ೧೯೮೯ರಲ್ಲಿ, ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಆಮೂಲಾಗ್ರವಾಗಿ ಪುನರ್ ರಚನೆಯಾದ ಮೇಲೆ, ಇಲಾಖಾ ಅಧಿಕಾರಿಗಳು ಪದೋನ್ನತಿ ಹೊಂದಿ ಜಿಲ್ಲಾ ನೋಂದಣಾಧಿಕಾರಿಗಳಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಜಿಲ್ಲಾ ಅಧಿಕಾರಿಗಳು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಹಾಗೂ ಭಾರತೀಯ ಪಾಲುಗಾರಿಕೆ ಅಧಿನಿಯಮ ೧೯೩೨ರಂತೆ ರಿಜಿಸ್ಟ್ರಾರ್ ಆಗಿ ಕೆಲಸ ನಿರ್ವಹಿಸುತ್ತಾರೆ. ಕೋಲಾರದಲ್ಲಿನ ಜಿಲ್ಲಾ ನೋಂದಣಾಧಿಕಾರಿ ಅವರ ಕಛೇರಿಯಲ್ಲಿ ಕೇಂದ್ರ ಸ್ಥಾನ ಸಹಾಯಕರು, ಅಧೀಕ್ಷಕರು ಸೇರಿದಂತೆ ಒಂಭತ್ತು ಜನ ಸಿಬ್ಬಂದಿ ವರ್ಗವಿದೆ. ಈ ಕಚೇರಿಯ ಅಧೀನದಲ್ಲಿ ತಾಲೂಕು ಮಟ್ಟದ ಉಪ ನೋಂದಣಿ ಕಚೇರಿಗಳು ಇವೆ. ಕೋಲಾರ, ಚಿಂತಾಮಣಿ ಹಾಗೂ ಬಂಗಾರಪೇಟೆಗಳಲ್ಲಿನ ಕಛೇರಿಗಳು ಹಿರಿಯ ಉಪ ನೋಂದಣಿ ಅಧಿಕಾರಿಗಳ ಹಾಗೂ ಉಳಿದ ತಾಲೂಕು ಕಚೇರಿಗಳಲ್ಲಿನ ಕಛೇರಿಗಳು ಕಿರಿಯ ಉಪ ನೋಂದಣಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಭಾರತೀಯ ನೋಂದಣಿ ಅಧಿನಿಯಮ ೧೯೦೮, ಭಾರತೀಯ ಮುದ್ರಾಂಕ ಅಧಿನಿಯಮ ೧೮೯೯, ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೭–ಇವುಗಳನ್ನು ಈ ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಜಿಲ್ಲಾ

ನೋಂದಣಾಧಿಕಾರಿ ಅವರು ತಾಲೂಕು ಮಟ್ಟದ ಕಚೇರಿಗಳ ಉಪ ನೋಂದಣಾಧಿಕಾರಿಗಳ ಕಾರ್ಯ ಪರಿಶೀಲನೆ, ತನಿಖೆ ಮುಂತಾದ ಆಡಳಿತಾತ್ಮಕ ಮೇಲ್ವಿಚಾರಣೆ ನಡೆಸುವರು. ರಾಜಸ್ವದ ಹಿತದೃಷ್ಟಿಯಿಂದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕಗಳ ವಸೂಲಾತಿ ಮತ್ತು ಸ್ವತ್ತುಗಳ ಬೆಲೆಗಳ ಅಪಮೌಲ್ಯದ ತನಿಖಾಧಿಕಾರಿಯೂ ಆಗಿರುತ್ತಾರೆ. ಉಪ ನೋಂದಣಾಧಿಕಾರಿಗಳು ತಮ್ಮ ಕಂದಾಯ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ದಸ್ತಾವೇಜುಗಳ ನೋಂದಣಿ, ಮುದ್ರಾಂಕ ನೋಂದಣಿ, ಶುಲ್ಕ ವಸೂಲಿ ಹಾಗೂ ವಿವಾಹ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವರು. ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಮೇಲಧಿಕಾರಿಯಾಗಿರುತ್ತಾರೆ.

### ಪದವಿ ಪೂರ್ವ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಇಲಾಖೆ

ಪದವಿ ಪೂರ್ವ ಶಿಕ್ಷಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ೧೯೭೪ರಲ್ಲಿ ಪ್ರತ್ಯೇಕಗೊಳಿಸಿದ ಬಳಿಕ, ಪದವಿ ಪೂರ್ವ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಕಛೇರಿಯು ಕೋಲಾರದಲ್ಲಿ ೧೯೭೦ರಲ್ಲಿ ಸ್ಥಾಪನೆಯಾಯಿತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಉಪ ನಿರ್ದೇಶಕರು ಕಛೇರಿ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಕಛೇರಿಯಲ್ಲಿ ಒಬ್ಬ ಶಾಖಾಧಿಕಾರಿ, ಒಬ್ಬ ಅಧೀಕ್ಷಕ ಸೇರಿದಂತೆ ಇತರ ಆರು ಜನ ಸಿಬ್ಬಂದಿ ಇದ್ದಾರೆ.

ಉಪ ನಿರ್ದೇಶಕರು ಜಿಲ್ಲೆಯ +೨ ಶಿಕ್ಷಣದ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿರುತ್ತಾರೆ. ಕೆಲವು ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಬೋಧನೆಯೂ ಇರುತ್ತದೆ. ಜಿಲ್ಲೆಯ ಎಲ್ಲಾ ಸರಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳು ಇವರ ವ್ಯಾಪ್ತಿಗೆ ಬರುತ್ತವೆ. ಕಾಲೇಜುಗಳಲ್ಲಿನ ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳ ಮೇಲ್ವಿಚಾರಣೆ, ತಪಾಸಣೆ, ಅನುದಾನಿತ ಕಾಲೇಜುಗಳ ವೇತನಬಿಲ್ಲಿಗೆ ಮೇಲು ಸಹಿ ಮಾಡುವುದು, ಖಾಸಗಿ ಕಾಲೇಜುಗಳ ಮಾನ್ಯತೆ ನವೀಕರಿಸುವ ಬಗ್ಗೆ ನಿರ್ದೇಶಕರಿಗೆ ವರದಿ ಸಲ್ಲಿಸುವುದು, ದ್ವಿತೀಯ ಪಿಯುಸಿ ಪರೀಕ್ಷೆಗಳ ವ್ಯವಸ್ಥೆ ಹಾಗೂ ಜಾಗೃತದಳದ ಮುಖ್ಯಸ್ಥರಾಗಿ ಕೆಲಸ ಮಾಡುವುದು, ಜಿಲ್ಲಾ ಸಾಕ್ಷರತಾ ಆಂದೋಲನದಲ್ಲಿ ಭಾಗವಹಿಸುವುದು ಮತ್ತಿತರ ಕಾರ್ಯಗಳನ್ನು ಉಪ ನಿರ್ದೇಶಕರು ನಿರ್ವಹಿಸಬೇಕಾಗುತ್ತದೆ. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ನಿರ್ದೇಶಕರು, ವೃತ್ತಿ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ

ಹಿಡುವಳಿ ಪ್ರಕರಣಗಳ ಹದ್ದುಬಸ್ತು ಅಳತೆ, ಮ್ಯುಟೇಷನ್ ದುರಸ್ತಿ, ಅಲಿನೇಷನ್ ಅಕ್ವಿಸಿಷನ್ ಮತ್ತು ದರಖಾಸ್ತು ಪ್ರಕರಣ ದುರಸ್ತಿ, ಕೋರ್ಟ್ ಕಮೀಷನ್ ಪ್ರಕರಣಗಳ ಅಳತೆ ಮತ್ತಿತರ ಕಾರ್ಯೋದ್ದೇಶಗಳನ್ನು ಹೊಂದಿರುವ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯು ರಾಜ್ಯಗಳ ಭಾಷಾವಾರು ವಿಂಗಡಣೆಗೆ ಮೊದಲು ಡಿಸ್ಟ್ರಿಕ್ಟ್ ಸರ್ವೆ ಆಫೀಸ್, ಸೂಪರಿಂಟೆಂಡೆಂಟ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಕೋಲಾರ ಜಿಲ್ಲೆಯಲ್ಲಿ ಪ್ರಸ್ತುತ ಎರಡು ಉಪವಿಭಾಗಗಳಿದ್ದು, ಕೋಲಾರ ಉಪವಿಭಾಗವು ಕೋಲಾರ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ, ಬಂಗಾರಪೇಟೆ ತಾಲೂಕುಗಳ ಹಾಗೂ ಚಿಕ್ಕಬಳ್ಳಾಪುರ ಉಪವಿಭಾಗವು ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಶಿಡ್ಲಘಟ್ಟ, ಗುಡಿಬಂಡೆ, ಗೌರಿಬಿದನೂರು, ಚಿಂತಾಮಣಿ ತಾಲೂಕುಗಳ ವ್ಯಾಪ್ತಿ ಹೊಂದಿವೆ.

ಭೂದಾಖಲೆಗಳ ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿರುವ ಉಪವಿಭಾಗೀಯ ಕಛೇರಿಯಲ್ಲಿ ಅವರಿಗೆ ಸಹಾಯಕರಾಗಿ ಅಧೀಕ್ಷಕ (ತಾಂತ್ರಿಕ), ಅಧೀಕ್ಷಕ (ಆಡಳಿತ), ಪರ್ಯಾವೇಕ್ಷಕರು, ಪ್ರಥಮ ದರ್ಜೆ ಭೂಮಾಪಕರು ಮೊದಲಾದ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಕೇಂದ್ರಗಳಲ್ಲಿ ತಾಲೂಕು ಭೂಮಾಪನ ಕಛೇರಿಯ ಮುಖ್ಯಸ್ಥರಾಗಿ ಪರ್ಯಾವೇಕ್ಷಕರು ಕಾರ್ಯನಿರ್ವಹಿಸುತ್ತಾರೆ. ಕೆ.ಎಲ್.ಆರ್.ಆಕ್ಟ್, ಸರ್ವೆ ಮ್ಯಾನುಯಲ್, ಸಿಟಿ ಸರ್ವೆ ಮ್ಯಾನುಯಲ್ ಮೊದಲಾದ ಕಾಯಿದೆ ನಿಬಂಧನೆಗಳನ್ನು ಈ ಇಲಾಖೆಯು ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳುತ್ತದೆ. ಭೂದಾಖಲೆಗಳ ಉಪನಿರ್ದೇಶಕ, ಬೆಂಗಳೂರುವಿಭಾಗ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಕಛೇರಿಯು ೧೯೮೫ರಲ್ಲಿ ಕೋಲಾರದಲ್ಲಿ ಪ್ರಾರಂಭಗೊಂಡಿತು. ಈ ಕಛೇರಿಯ ಮುಖ್ಯಸ್ಥರ ಹುದ್ದೆಯು ಆಗ ಸಹಾಯಕ ನಿರ್ದೇಶಕ ಎಂದು ಇದ್ದದ್ದು, ೨೦೦೫ರಿಂದ ಉಪನಿರ್ದೇಶಕ ಎಂದು ಬದಲಾವಣೆಗೊಂಡಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯಲ್ಲಿ ಅಭಿವೃದ್ಧಿ ಅಧಿಕಾರಿ, ನಿರೂಪಣಾಧಿಕಾರಿ, ಅಂಗವಿಕಲ ಕಲ್ಯಾಣಾಧಿಕಾರಿಯೂ ಸೇರಿದಂತೆ ಒಟ್ಟು ೨೪ ಜನ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

ಗರ್ಭಿಣಿ, ಬಾಣಂತಿಯರಲ್ಲಿ ಅಪೌಷ್ಠಿಕತೆ ನಿವಾರಿಸಿ ಶಿಶು ಮರಣ ಮತ್ತು ಗರ್ಭಿಣಿ ಬಾಣಂತಿಯರ ಮರಣವನ್ನು ಕಡಿಮೆ ಮಾಡುವುದು, ಸ್ತ್ರೀ ಶಕ್ತಿ ಗುಂಪುಗಳ ರಚನೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ಮತ್ತು ಕಾನೂನು ಸಹಾಯ ನೀಡುವುದು, ಗ್ರಾಮೀಣ ಹೆಣ್ಣು ಮಕ್ಕಳಿಗೆ ಶಾಲಾ ಹಾಜರಾತಿ ಶಿಷ್ಯವೇತನ ನೀಡುವುದು, ಮಕ್ಕಳ ಕಲ್ಯಾಣಕ್ಕೆ ಶ್ರಮಿಸಿದವರಿಗೆ ಪ್ರಶಸ್ತಿ ನೀಡುವುದು, ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆ, ನಿರ್ಗತಿಕ ಹಾಗೂ ಅನಾಥ ಮಕ್ಕಳಿಗಾಗಿ ಕುಟೀರ ಸ್ಥಾಪನೆ ಮೊದಲಾದುವು ಈ ಇಲಾಖೆಯ ಮುಖ್ಯ ಧ್ಯೇಯೋದ್ದೇಶ ಮತ್ತು ಕಾರ್ಯಚಟುವಟಿಕೆಗಳಾಗಿವೆ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

**ಮೀನುಗಾರಿಕೆ ಇಲಾಖೆ**

ರಾಜ್ಯಗಳ ಪುನರ್‌ವಿಂಗಡಣೆ ಬಳಿಕ ಕೋಲಾರದಲ್ಲಿ ಪ್ರಾರಂಭವಾದ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯು ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ಹಾಗೂ ಆಡಳಿತ ನಿಯಂತ್ರಣ ಉದ್ದೇಶವನ್ನು ಹೊಂದಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಿದ್ದು, ಇವರಿಗೆ ಸಹಾಯಕರಾಗಿ ಇಬ್ಬರು ಪ್ರಥಮ ದರ್ಜೆ ಸಹಾಯಕರೂ ಸೇರಿದಂತೆ ಒಟ್ಟು ಎಂಟು ಜನ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ. ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ, ಮೀನು ಪಾಲನಾ ಕೊಳಗಳ ನಿರ್ಮಾಣಕ್ಕೆ ಸಹಾಯಧನ ನೀಡಿಕೆ, ಮೀನು ಕೃಷಿ ಅಭಿವೃದ್ಧಿ, ತರಬೇತಿ ಮತ್ತು ವಿಸ್ತರಣೆ, ಅಲಂಕಾರಿಕ ಮೀನುಗಳ ಉತ್ಪಾದನೆ ಹಾಗೂ ಮಾರಾಟಕ್ಕಾಗಿ ಮಹಿಳೆಯರಿಗೆ ಧನ ಸಹಾಯ ನೀಡಿಕೆ ಮೊದಲಾದುವು ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೆಲವು ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಾಗಿವೆ ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು ವಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

**ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ**

ಜಿಲ್ಲೆಯ ಯುವಜನತೆಯಲ್ಲಿ ಕ್ರೀಡಾಸಕ್ತಿ ಬೆಳೆಸಿ, ಕ್ರೀಡಾಭಿವೃದ್ಧಿಗೆ ಪ್ರೋತ್ಸಾಹ ನೀಡುವ ಮೂಲಕ ಆರೋಗ್ಯ ಪೂರ್ಣ ಯುವಶಕ್ತಿಯನ್ನು ರೂಪಿಸುವ ಧ್ಯೇಯೋದ್ದೇಶದಿಂದ ಕೋಲಾರದಲ್ಲಿ ಈ ಇಲಾಖಾ ಕಛೇರಿಯನ್ನು ಸ್ಥಾಪಿಸಲಾಗಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ ಅವರು ಪ್ರಸ್ತುತ ಈ ಕಛೇರಿಯ ಮುಖ್ಯಾಧಿಕಾರಿಯಾಗಿದ್ದು, ಕಛೇರಿಯಲ್ಲಿ ಇವರ ನೆರವಿಗೆ ಅಧೀಕ್ಷಕ, ದ್ವಿತೀಯ ದರ್ಜೆ ಸಹಾಯಕ ಮೊದಲಾಗಿ ಇತರ ಮೂವರು ಸಿಬ್ಬಂದಿ ಇದ್ದಾರೆ.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ೧೫ರಿಂದ ೩೫ವರ್ಷದ ಯುವಕ, ಯುವತಿಯರನ್ನೊಳಗೊಂಡ ಯುವ ಸಂಘಗಳನ್ನು ರಚಿಸುವುದು, ಯುವ ಜನತೆಗಾಗಿ ಪ್ಯಾರಾ ಸೇಲಿಂಗ್ ನಡೆಸುವುದು, ಗ್ರಾಮೀಣ ಕ್ರೀಡಾಕೂಟ, ಶಿಖರಾರೋಹಣ, ಬೇಸಿಗೆ ಶಿಬಿರ, ದಸರಾ ಕ್ರೀಡಾ ಕೂಟ, ಯುವಜನ ಮೇಳ ಮೊದಲಾದವುಗಳನ್ನು ನಡೆಸಿ, ಆಯ್ಕೆಯಾದವರನ್ನು ರಾಜ್ಯಮಟ್ಟಕ್ಕೆ ಕಳುಹಿಸುವುದು; ಬೆಂಗಳೂರಿನ ವಿದ್ಯಾನಗರ ಹಾಗೂ ಕುಂಬಳಗೂಡುಗಳಲ್ಲಿ ನಡೆಸುವ ಯುವ ಚೇತನ, ಯುವ ಪ್ರೇರಣ ಹಾಗೂ ಯುವ ಸಂವಹನ ಶಿಬಿರಗಳಿಗೆ ಯುವ ಸಂಘಗಳ ಸದಸ್ಯರನ್ನು ನಿಯೋಜಿಸುವುದು; ಅಂತಹ ಸಂದರ್ಭಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರಯಾಣಭತ್ಯೆ ಮತ್ತು ಟೀ–ಶರ್ಟ್ ಇತ್ಯಾದಿ ಒದಗಿಸುವುದು; ತಾಲೂಕುಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣ

ಮಾಡುವುದು, ಗ್ರಾಮೀಣ ಕ್ರೀಡಾ ಕೇಂದ್ರಗಳಿಗೆ ಅನುದಾನ ನೀಡುವುದು, ಶಾಲಾಕಾಲೇಜುಗಳ ಬಯಲು ರಂಗಮಂದಿರಗಳನ್ನು ಅಭಿವೃದ್ಧಿಪಡಿಸುವುದು ಮೊದಲಾದ ಇತರ ಕಾರ್ಯಚಟುವಟಿಕೆಗಳನ್ನೂ ಈ ಕಛೇರಿ ನಿರ್ವಹಿಸುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯ್ತಿ ಕೋಲಾರ ಹಾಗೂ ಆಯುಕ್ತರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿದ್ದಾರೆ.

## ರೇಷ್ಮೆ ಇಲಾಖೆ

ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸುವ ಮೂಲಕ ರೇಷ್ಮೆ ಬೆಳೆಗಾರರಿಗೂ, ರೇಷ್ಮೆ ಉದ್ದಿಮೆದಾರರಿಗೂ ನೆರವಾಗುವ ಧ್ಯೇಯೋದ್ದೇಶದಿಂದ ಕೋಲಾರದಲ್ಲಿ ೧೯೮೭ರಿಂದ ರೇಷ್ಮೆ ಉಪನಿರ್ದೇಶಕರ ಕಛೇರಿಯನ್ನು ಪ್ರಾರಂಭಿಸಲಾಗಿದೆ. ಜಿಲ್ಲಾವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು ಇವರ ನೆರವಿಗೆ ಪತ್ರಾಂಕಿತ ವ್ಯವಸ್ಥಾಪಕ, ಅಧೀಕ್ಷಕ, ಪ್ರಥಮದರ್ಜೆ ಸಹಾಯಕ ಮೊದಲಾದ ಇತರ ೧೪ ಜನ ಸಿಬ್ಬಂದಿ ಇದ್ದಾರೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗಳಿದ್ದು, ಹೋಬಳಿ ಮಟ್ಟದಲ್ಲಿ ರೇಷ್ಮೆ ವಿಸ್ತರಣಾಧಿಕಾರಿ ಕಾರ್ಯನಿರ್ವಹಿಸುತ್ತಾರೆ. ಗೂಡಿನ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಅಧಿಕಾರಿಗಳು, ಬಿತ್ತನೆ ಕೋಠಿಗಳಲ್ಲಿ ಬಿತ್ತನೆ ಕೋಠಿ ಅಧಿಕಾರಿಗಳು ಹಾಗೂ ರೇಷ್ಮೆ ಕೃಷಿಕ್ಷೇತ್ರಗಳಲ್ಲಿ ರೇಷ್ಮೆ ಕೃಷಿ ಕ್ಷೇತ್ರಾಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯ ಕ್ಯಾಲನೂರು ಹಾಗೂ ಮುಳಬಾಗಿಲುಗಳಲ್ಲಿ ಗೂಡಿನ ಮಾರುಕಟ್ಟೆಗಳು, ಕೋಲಾರ, ವಕ್ಕಲೇರಿ, ಹುಂಗೇನಹಳ್ಳಿ, ಮಾಲೂರು, ಬಂಗಾರಪೇಟೆ, ಬೇತಮಂಗಲ, ಮುಳಬಾಗಿಲು ಹಾಗೂ ಶ್ರೀನಿವಾಸಪುರಗಳಲ್ಲಿ ಬಿತ್ತನೆಕೋಠಿಗಳು ಮತ್ತು ಕುಪ್ಪನಹಳ್ಳಿ, ಏನಿಗದಲೆ, ದೇವರಾಯಸಮುದ್ರಗಳಲ್ಲಿ ಕೃಷಿಕ್ಷೇತ್ರಗಳಿವೆ.

ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ರೇಷ್ಮೆ ಕೃಷಿಗೆ ಅಗತ್ಯವಾದ ರೋಗರಹಿತ ಮೊಟ್ಟೆಗಳನ್ನು ಬಿತ್ತನೆಕೋಠಿಗಳಿಂದ ಒದಗಿಸುವುದು, ತೋಟ ನಿರ್ವಹಣೆ, ಹುಳು ಸಾಕಾಣಿಕೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕಸಲಹೆಗಳನ್ನು ನೀಡುವುದು, ಗೂಡಿಗೆ ನ್ಯಾಯಬೆಲೆ ದೊರಕಿಸುವುದು, ಬೆಳೆಗಾರರು, ರೀಲರುಗಳು ಹಾಗೂ ಉದ್ಯಮದವರಿಗೆ ಸಾಲಸೌಲಭ್ಯ ಹಾಗೂ ಸಹಾಯಧನಗಳನ್ನು ನೀಡುವುದು; ಪರಿಶಿಷ್ಟ ಜಾತಿ, ಪಂಗಡದವರ ಅಭಿವೃದ್ಧಿ ಕಾರ್ಯಕ್ರಮಗಳು, ಕೇಂದ್ರ ರೇಷ್ಮೆ ಮಂಡಳಿ ಸಹಯೋಗದೊಂದಿಗೆ ಜಾರಿಯಲ್ಲಿರುವ ಕೆಟಲಿಟಿಕ್ ಅಭಿವೃದ್ಧಿ ಪಂಚವಾರ್ಷಿಕ ಯೋಜನೆಗಳು, ಜಪಾನ್ ಅಂತರರಾಷ್ಟ್ರೀಯ ಸಂಸ್ಥೆಯ ಸಹಯೋಗದಲ್ಲಿ (ಜೈಕಾ) ಸಿ.ಎಸ್.ಆರ್. ಸಂಕರಣ ದ್ವಿತಳಿ ಅಭಿವೃದ್ಧಿ ಕಾರ್ಯಕ್ರಮ ಮೊದಲಾದ ಅಭಿವೃದ್ಧಿ ಚಟುವಟಿಕೆಗಳನ್ನು ಈ ಇಲಾಖೆ ನಿರ್ವಹಿಸುತ್ತದೆ. ಕೆಸಿಎಸ್ಆರ್‌ನೊಂದಿಗೆ ಕರ್ನಾಟಕ ರೇಷ್ಮೆ ಗೂಡು ಮತ್ತು ರೇಷ್ಮೆ ಉತ್ಪಾದನೆ ನಿಯಮ ೧೯೫೯, ಪಂಚಾಯತ್‌ರಾಜ್ ನಿಯಮ ಮತ್ತಿತರ ನಿಯಮ ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಕೋಲಾರ ಹಾಗೂ ರೇಷ್ಮೆ ಜಂಟಿ ನಿರ್ದೇಶಕ, ಬೆಂಗಳೂರು ವಿಭಾಗ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿದ್ದಾರೆ.

## ಲೋಕೋಪಯೋಗಿ ಇಲಾಖೆ

ರಾಜ್ಯ ಲೋಕೋಪಯೋಗಿ ಇಲಾಖೆಯ ಕೋಲಾರ ವಿಭಾಗ ಕಛೇರಿಯು ಕೋಲಾರದಲ್ಲಿ ೧೯೬೩ರಲ್ಲಿ ಪ್ರಾರಂಭವಾಯಿತು. ಆಗ ಈ ಕಛೇರಿ ಮುಖ್ಯಸ್ಥರ ಹುದ್ದೆಯು ಡಿವಿಜನಲ್ ಇಂಜಿನಿಯರ್ ಎಂದು ಇದ್ದು, ೧೯೫೦ರಿಂದ ಕಾರ್ಯಪಾಲಕ ಇಂಜಿನಿಯರ್ ಎಂದು ಬದಲಾಗಿದೆ. ೧೯೮೭ಕ್ಕೆ ಮೊದಲು ಜಿಲ್ಲೆಯಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರದಲ್ಲಿ ವಿಭಾಗ ಕಛೇರಿಗಳಿದ್ದವು. ಈಗ ಕೋಲಾರ ವಿಭಾಗ ಕಛೇರಿಯೇ ಇಡೀ ಜಿಲ್ಲೆಯ ಕಾರ್ಯನಿರ್ವಹಣೆ ಮಾಡುತ್ತಿದೆ. ಕಾರ್ಯನಿರ್ವಾಹಕ ಅಭಿಯಂತರ ಅವರು ಈ ಕಛೇರಿಯ ಮುಖ್ಯಸ್ಥರಿದ್ದು, ಇವರ ನೆರವಿಗೆ ತಾಂತ್ರಿಕ ಸಹಾಯಕ, ಸಹಾಯಕ ಅಭಿಯಂತರ ಮತ್ತಿತರ ೩೩ ಜನ ಇತರ ಸಿಬ್ಬಂದಿ ಇದ್ದಾರೆ. ಜಿಲ್ಲೆಯಲ್ಲಿ ರಸ್ತೆ ಸೇತುವೆ ಮತ್ತು ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ ಈ ಇಲಾಖೆಯ ಪ್ರಧಾನ ಕಾರ್ಯೋದ್ದೇಶವಾಗಿದೆ. ಈ ಸಂಬಂಧಿಸಿದ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸುವುದು, ಬಿಲ್ಲುಗಳ ಬಟವಾಡೆ, ಖಾಸಗಿ ಕಟ್ಟಡಗಳಲ್ಲಿನ ಸರ್ಕಾರಿ ಕಛೇರಿಗಳ ಬಾಡಿಗೆ ನಿಗದಿ ಮೊದಲಾದ ಕಾರ್ಯಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ (ಹೆಚ್ಚಿನ ವಿವರಕ್ಕೆ ಅಧ್ಯಾಯ ೭ನ್ನೂ ನೋಡಿರಿ). ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ, ಉಗ್ರಾಣ ಕೈಪಿಡಿ, ಲೋಕೋಪಯೋಗಿ

ಇಲಾಖೆ ಸಂಹಿತೆ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ಪಾಲಿಸುತ್ತದೆ. ಅಧೀಕ್ಷಕ ಅಭಿಯಂತರ, ಬೆಂಗಳೂರು ವೃತ್ತ ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

**ವಾಣಿಜ್ಯ ತೆರಿಗೆ ಇಲಾಖೆ**

ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಪ್ರವೇಶ ತೆರಿಗೆ ಹಾಗೂ ವೃತ್ತಿ ತೆರಿಗೆ ಕಾಯ್ದೆಯಡಿ ಕರ ನಿರ್ಧಾರಣೆ ಹಾಗೂ ತೆರಿಗೆ ವಸೂಲಿ ಮತ್ತಿತರ ಕಾರ್ಯಗಳ ನಿರ್ವಹಣೆಗಾಗಿ ಕೋಲಾರದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ ಕಛೇರಿಯನ್ನು ೧೯೫೮ರಲ್ಲಿ ಪ್ರಾರಂಭಿಸಲಾಗಿದ್ದಿತು. ೧೯೭೨ರಿಂದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ ಎಂದು ಬದಲಿಸಲಾಗಿರುತ್ತದೆ.

ಜಿಲ್ಲೆಯಲ್ಲಿ ಮೂವರು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಿದ್ದು ಅವರ ಕಛೇರಿಗಳು ಕೋಲಾರ (ಕೋಲಾರ, ಮುಳಬಾಗಿಲು ಹಾಗೂ ಶಿಡ್ಲಘಟ್ಟ ತಾಲೂಕುಗಳ ವ್ಯಾಪ್ತಿ), ಬಂಗಾರಪೇಟೆ (ಬಂಗಾರಪೇಟೆ ಮತ್ತು ಮಾಲೂರು ತಾಲೂಕುಗಳು ಹಾಗೂ ಕೆ.ಜಿ.ಎಫ್. ಪಟ್ಟಣ ವ್ಯಾಪ್ತಿ) ಹಾಗೂ ಚಿಂತಾಮಣಿ (ಚಿಂತಾಮಣಿ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ ಮತ್ತು ಶ್ರೀನಿವಾಸಪುರ ತಾಲೂಕುಗಳ ವ್ಯಾಪ್ತಿ)ಗಳಲ್ಲಿವೆ. ಇವರ ಆಡಳಿತ ವ್ಯಾಪ್ತಿಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳಿದ್ದು ಅವರ ಕಛೇರಿಗಳು ಕೋಲಾರ (ಕೋಲಾರ, ಮುಳಬಾಗಿಲು ಹಾಗೂ ಶಿಡ್ಲಘಟ್ಟ ತಾಲೂಕುಗಳ ವ್ಯಾಪ್ತಿ), ಚಿಂತಾಮಣಿ (ಚಿಂತಾಮಣಿ, ಬಾಗೇಪಲ್ಲಿ ಮತ್ತು ಶ್ರೀನಿವಾಸಪುರ ತಾಲೂಕುಗಳ ವ್ಯಾಪ್ತಿ), ಕೆ.ಜಿ.ಎಫ್. (ಕೆಜಿಎಫ್ ಪಟ್ಟಣ, ಬಂಗಾರಪೇಟೆ ಮತ್ತು ಮಾಲೂರು ತಾಲೂಕುಗಳ ವ್ಯಾಪ್ತಿ) ಹಾಗೂ ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ, ಗೌರಿಬಿದನೂರು ಮತ್ತು ಗುಡಿಬಂಡೆ ತಾಲೂಕುಗಳ ವ್ಯಾಪ್ತಿ)ಗಳಲ್ಲಿವೆ. ಇವರಲ್ಲದೆ ಕೋಲಾರದಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಗುಪ್ತ ವಾರ್ತೆ) ಅವರ ಕಛೇರಿ ಇದ್ದು ಅದು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದೆ. ವಾಣಿಜ್ಯ ತೆರಿಗೆ ಅಧಿಕಾರಿ (ಗುಪ್ತ ವಾರ್ತೆ) ಅವರ ಕಛೇರಿ ಚಿಂತಾಮಣಿಯಲ್ಲಿ ಇದ್ದು ಅದೂ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದೆ. ಕೋಲಾರದಲ್ಲಿ ವೃತ್ತಿ ತೆರಿಗೆ ಅಧಿಕಾರಿಯವರ ಕಛೇರಿಯೂ ಇದ್ದು ಅದೂ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತದೆ. ಈ ಇಲಾಖಾ ಕಛೇರಿಗಳು ಕರ್ನಾಟಕ ಮಾರಾಟ ತೆರಿಗೆ ೧೯೫೭, ಕೇಂದ್ರ ಮಾರಾಟ ತೆರಿಗೆ ೧೯೫೬, ಪ್ರವೇಶ ತೆರಿಗೆ ೧೯೭೯ ಹಾಗೂ ವೃತ್ತಿ ತೆರಿಗೆ ೧೯೭೬ – ಮೊದಲಾದ ನಿಯಮ ಹಾಗೂ ಅಧಿನಿಯಮಗಳನ್ನು ತಮ್ಮ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತವೆ. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಬೆಂಗಳೂರು ವಿಭಾಗ, ಬೆಂಗಳೂರು ಅವರು ಮೇಲಧಿಕಾರಿ ಆಗಿದ್ದಾರೆ.

**ವಾರ್ತಾ ಇಲಾಖೆ**

ಸಹಾಯಕ ನಿರ್ದೇಶಕರ ಕಛೇರಿ, ವಾರ್ತಾ ಇಲಾಖೆಯು ಪ್ರಾರಂಭದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿದ್ದು, ೧೯೭೨ರಿಂದ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಾಯಕ ನಿರ್ದೇಶಕರು ಕಛೇರಿಯ ಮುಖ್ಯಾಧಿಕಾರಿಯಾಗಿದ್ದು ವಾರ್ತಾ ಸಹಾಯಕ, ಗ್ರಂಥಪಾಲಕ, ದೃಕ್–ಶ್ರವಣ ಮೇಲ್ವಿಚಾರಕರೂ ಸೇರಿ ಇತರ ಹತ್ತು ಜನ ಸಿಬ್ಬಂದಿ ಈ ಕಛೇರಿಯಲ್ಲಿದ್ದಾರೆ. ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ಮತ್ತೊಬ್ಬ ಸಹಾಯಕ ನಿರ್ದೇಶಕರಿದ್ದು ಅವರದು ಸ್ವತಂತ್ರ ಕಾರ್ಯನಿರ್ವಹಣೆಯಾಗಿರುತ್ತದೆ. ಸರ್ಕಾರದ ಪ್ರಗತಿಪರ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಧನೆಗಳನ್ನು ದೃಕ್, ಶ್ರವಣ ಮತ್ತಿತರ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಆಕರ್ಷಕವಾಗಿ ತಿಳಿಸಿಕೊಡುವುದು, ಸಾಮಾಜಿಕ ಅರಿವಿನ ಬಗ್ಗೆ ಜಾಗೃತಿ ಉಂಟುಮಾಡುವುದು, ಸಾರ್ವಜನಿಕರು ಹಾಗೂ ಸರ್ಕಾರದ ನಡುವೆ ಸಂಪರ್ಕಕೊಂಡಿಯಾಗಿ ಕೆಲಸ ಮಾಡುವುದು ಈ ಕಛೇರಿಯ ಮುಖ್ಯ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಗ್ರಾಮಸಂಪರ್ಕ, ವಿಚಾರಗೋಷ್ಠಿ, ವಸ್ತುಪ್ರದರ್ಶನ, ಚಲನಚಿತ್ರ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳನ್ನೇರ್ಪಡಿಸುವುದು, ಸರ್ಕಾರದ ಪ್ರಗತಿಪರ ಯೋಜನೆಗಳು, ಅಭಿವೃದ್ಧಿ ಕಾರ್ಯಗಳ ಬಗ್ಗೆ ಪತ್ರಿಕೆ ಮತ್ತಿತರ ಸಮೂಹ ಮಾಧ್ಯಮಗಳಿಗೆ ಸುದ್ದಿ ನೀಡುವುದು, ಕ್ಲಿಪಿಂಗ್ಸ್ ಮೂಲಕ ಜನತೆಯ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರುವುದು ಮೊದಲಾದ ಕಾರ್ಯಗಳನ್ನು ಈ ಇಲಾಖೆ ನಿರ್ವಹಿಸುತ್ತದೆ. ಉಪನಿರ್ದೇಶಕರು, ವಾರ್ತಾಇಲಾಖೆ, ಬೆಂಗಳೂರು– ಅವರು ಮೇಲಧಿಕಾರಿಯಾಗಿದ್ದಾರೆ.

**ಸಣ್ಣ ಉಳಿತಾಯ ಇಲಾಖೆ**

ಸಾರ್ವಜನಿಕರಲ್ಲಿ ಉಳಿತಾಯದ ಮನೋಭಾವವನ್ನು ಬೆಳೆಸುವುದಲ್ಲದೆ ಅಂಚೆ ಕಛೇರಿಯ ಸಣ್ಣ ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸುವಂತೆ ಅವರನ್ನು ಪ್ರೇರೇಪಿಸುವ, ಆ ಮೂಲಕ ಸರ್ಕಾರಕ್ಕೆ ಉಪಯುಕ್ತವಾದ ಸಂಪನ್ಮೂಲವನ್ನು ಕ್ರೋಢೀಕರಿಸುವ ಉದ್ದೇಶ ಹೊಂದಿರುವ ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ಕೋಲಾರದಲ್ಲಿ ೧೯೮೭ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಛೇರಿಗೆ ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಇಬ್ಬರು ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಒಟ್ಟು ೧೫ ಜನ ಇತರ ಸಿಬ್ಬಂದಿ ಇದ್ದಾರೆ. ನಿರುದ್ಯೋಗಿಗಳಿಗೆ ಕಮಿಷನ್ ಆಧಾರದ ಮೇಲೆ ಉದ್ಯೋಗ ಒದಗಿಸುವುದು, ಸರ್ಕಾರಿ, ಅರೆ–ಸರ್ಕಾರಿ ಸಂಘ–ಸಂಸ್ಥೆಗಳಲ್ಲಿ ವೇತನ ಉಳಿತಾಯ ಜಾರಿಗೊಳಿಸುವುದು ಮೊದಲಾದ ಚಟುವಟಿಕೆಗಳು ಈ ಕಛೇರಿಯದ್ದಾಗಿವೆ. ಕೆಸಿಎಸ್‌ಆರ್, ಕೆಎಫ್‌ಸಿ ಮತ್ತಿತರ ಸೇವಾ ನಿಯಮಾವಳಿಗಳನ್ನು ಈ ಕಛೇರಿಯು ಅನುಸರಿಸುತ್ತದೆ. ನಿರ್ದೇಶಕ, ಸಣ್ಣ ಉಳಿತಾಯ ಹಾಗೂ ಲಾಟರಿ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

**ಸಾರಿಗೆ ಇಲಾಖೆ**

ಹೊಸ ವಾಹನಗಳ ನೋಂದಣಿ, ವಾಹನ ಚಾಲನಾ ಅನುಜ್ಞಾ ಪತ್ರ ನೀಡುವುದು ಮೊದಲಾದ ರಸ್ತೆ ಸಾರಿಗೆಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಮಾಡುವ ಉದ್ದೇಶದಿಂದ ಕೋಲಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಯು ೧೯೫೮ರಲ್ಲಿ ಸ್ಥಾಪಿತವಾಯಿತು. ಆ ಮೊದಲು ಈ ಕಾರ್ಯಗಳನ್ನು ಪೊಲೀಸ್ ಇಲಾಖೆಯು ನಿರ್ವಹಿಸುತ್ತಿದ್ದಿತು. ಪ್ರಸ್ತುತ, ಪ್ರಾದೇಶಿಕ ಸಾರಿಗೆ ಅಧಿಕಾರಿ ಮತ್ತು ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಅವರು ಕಛೇರಿಯ ಮುಖ್ಯಸ್ಥರಾಗಿದ್ದು, ಅಧೀಕ್ಷಕ, ಹಿರಿಯ ಮೋಟಾರುವಾಹನ ನಿರೀಕ್ಷಕರು ಮೊದಲಾಗಿ ಇತರ ೩೮ ಜನ ಸಿಬ್ಬಂದಿ ಈ ಕಛೇರಿಯಲ್ಲಿದ್ದಾರೆ. ಕೋಲಾರ, ಮುಳಬಾಗಿಲು, ಚಿಂತಾಮಣಿ ಮತ್ತು ಶ್ರೀನಿವಾಸಪುರ ತಾಲೂಕುಗಳು ಈ ಕಛೇರಿಯ ಅಧಿಕಾರ ವ್ಯಾಪ್ತಿಗೆ ಸೇರಿವೆ. ಇವುಗಳಲ್ಲದೆ ಕೆಜಿಎಫ್‌ನಲ್ಲಿನ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ (ಮಾಲೂರು ಮತ್ತು ಬಂಗಾರಪೇಟೆ ತಾಲೂಕುಗಳ ವ್ಯಾಪ್ತಿ) ಮತ್ತು ಚಿಕ್ಕಬಳ್ಳಾಪುರದಲ್ಲಿನ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ (ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಗೌರಿಬಿದನೂರು, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲೂಕುಗಳ ವ್ಯಾಪ್ತಿ) ಹಾಗೂ ನಂಗಲಿ, ಬಾಗೇಪಲ್ಲಿ, ಗೌರಿಬಿದನೂರು ಮತ್ತು ರಾಯಲಪಾಡುಗಳಲ್ಲಿನ ತನಿಖಾ ಠಾಣೆಗಳ ಉಸ್ತುವಾರಿಯೂ ಇವರಿಗೆ ಸೇರಿದ್ದಾಗಿದೆ. ವಾಹನಗಳ ಮಾಲೀಕತ್ವ ವರ್ಗಾವಣೆ, ವಾಹನಗಳ ಯೋಗ್ಯತಾ ಪ್ರಮಾಣ ಪತ್ರ ನವೀಕರಿಸುವುದು, ಅಂತರರಾಷ್ಟ್ರೀಯ ಚಾಲನಾ ಪತ್ರ ನೀಡುವುದು, ವಾಹನಗಳ ತೆರಿಗೆ ಮತ್ತು ಶುಲ್ಕ ವಸೂಲಾತಿ ಹಾಗೂ ಪ್ರವರ್ತನ ಕಾರ್ಯನಿರ್ವಹಿಸುವುದು ಮೊದಲಾದ ಕಾರ್ಯಗಳೂ ಈ ಇಲಾಖೆಗೆ ಸಂಬಂಧಿಸಿದುವಾಗಿವೆ. ಮೋಟಾರು ವಾಹನ ಕಾಯ್ದೆ ೧೯೮೮, ಮೋಟಾರು ವಾಹನ ನಿಯಮಗಳು ೧೯೮೯, ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ೧೯೫೭ ಮತ್ತು ನಿಯಮಗಳು ಮೊದಲಾದ ಕಾಯಿದೆ ಹಾಗೂ ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಉಪಸಾರಿಗೆ ಆಯುಕ್ತ ಬೆಂಗಳೂರು ವಿಭಾಗ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

**ಸಾರ್ವಜನಿಕ ಗ್ರಂಥಾಲಯ ಇಲಾಖೆ**

ಜನಸಾಮಾನ್ಯರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವುದಲ್ಲದೆ, ಸಾಮಾಜಿಕ, ವೈಜ್ಞಾನಿಕ ಹಾಗೂ ನಾಗರಿಕ ಪ್ರಜ್ಞೆಯನ್ನು ಅರಳಿಸುವ ಉದ್ದೇಶದಿಂದ ರಾಜ್ಯದಲ್ಲಿ ಗ್ರಂಥಾಲಯ ಸೇವೆಯನ್ನು ಒದಗಿಸಲು ಕರ್ನಾಟಕ ಸರ್ಕಾರವು ೧೯೬೫ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆಯನ್ನು ರೂಪಿಸಿತು. ಅದಕ್ಕನುಗುಣವಾಗಿ, ಕೋಲಾರದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯವು ೧೯೭೦ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ವ್ಯಾಪ್ತಿ ಆಡಳಿತ ನಿರ್ವಹಣಾಧಿಕಾರ ಹೊಂದಿದ ಮುಖ್ಯ ಗ್ರಂಥಾಲಯಾಧಿಕಾರಿಯು ಈ ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯಸ್ಥರಾಗಿರುವರು. ಗ್ರಂಥಾಲಯ ಇಲಾಖಾ ಅಧಿನಿಯಮ ೧೯೬೫ರ ನಿಯಮಗಳನ್ನು ಈ ಕಚೇರಿ ಅನ್ವಯಗೊಳಿಸುತ್ತದೆ. ಗ್ರಂಥಪಾಲಕರು, ಓರ್ವ ಸಹ ಗ್ರಂಥಪಾಲಕ, ೧೧ ಜನ ಗ್ರಂಥಾಲಯ ಸಹಾಯಕರು ಹಾಗೂ ೭೯ ಜನ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರು ಮತ್ತಿತರ ಸಿಬ್ಬಂದಿ ಇವರ ನೆರವಿಗೆ ಇದೆ.

ಜಿಲ್ಲೆಯಲ್ಲಿ ೧೧ ತಾಲೂಕು ಗ್ರಂಥಾಲಯಗಳು, ೨೯ ಗ್ರಾಮೀಣ ಗ್ರಂಥಾಲಯಗಳು, ೧೩ ಗ್ರಂಥ ವಿರತಣಾ ಕೇಂದ್ರಗಳಿದ್ದು, ಗ್ರಂಥಾಲಯ ಸೇವೆ ಒದಗಿಸುತ್ತಿವೆ. ದಿನಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ವಿವಿಧ ಭಾಷೆ, ವಿಷಯಗಳ ಪುಸ್ತಕಗಳನ್ನು ಸಾರ್ವಜನಿಕರಿಗೆ ಒದಗಿಸುವುದಲ್ಲದೆ, ಗ್ರಂಥಾಲಯಗಳ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸಲು ಸಭೆ, ಸಮಾರಂಭ, ವಿಚಾರ ಸಂಕಿರಣ ಹಾಗೂ ಸ್ಪರ್ಧೆಗಳನ್ನು ಆಗಾಗ ಏರ್ಪಡಿಸಲಾಗುತ್ತದೆ. ಗ್ರಾಮಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಅನುಷ್ಠಾನಗೊಳ್ಳು ತ್ತಿದ್ದು, ೩೦೬ ಗ್ರಾಮ ಪಂಚಾಯಿತಿಗಳ ಪೈಕಿ ಈಗಾಗಲೇ ೭೯ ಗ್ರಾಮಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ಗ್ರಂಥಾಲಯಗಳು ಇಲ್ಲದ ಪ್ರದೇಶಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಂಚಾರಿ ಗ್ರಂಥಾಲಯ ಸೇವೆ ಪ್ರಾರಂಭಿಸುವ ಉದ್ದೇಶವೂ ಈ ಇಲಾಖೆಗೆ ಇದೆ. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಮೇಲಧಿಕಾರಿಯಾಗಿರುತ್ತಾರೆ.

**ಸಾರ್ವಜನಿಕ ಶಿಕ್ಷಣ ಇಲಾಖೆ**

ಸರ್ಕಾರದ 'ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ'ಯಂತೆ ಜಿಲ್ಲೆಯ ಎಲ್ಲಾ ವರ್ಗದ ಮಕ್ಕಳಿಗೆ ಅಗತ್ಯವಾದ ಶಿಕ್ಷಣ ನೀಡುವುದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಮುಖ ಕಾರ್ಯೋದ್ದೇಶವಾಗಿದೆ. ಸಮರ್ಪಕ ಕಾರ್ಯಾನುಕೂಲಕ್ಕಾಗಿ ಕೋಲಾರ ಜಿಲ್ಲೆಯನ್ನು ಶೈಕ್ಷಣಿಕವಾಗಿ ಕೋಲಾರ ದಕ್ಷಿಣ ಜಿಲ್ಲೆ ಹಾಗೂ ಕೋಲಾರ ಉತ್ತರ ಜಿಲ್ಲೆ ಎಂದು ವಿಭಾಗಿಸಲಾಗಿದೆ. ಕೋಲಾರ ದಕ್ಷಿಣ ಜಿಲ್ಲೆಯ ವ್ಯಾಪ್ತಿಗೆ ಕೋಲಾರ, ಮಾಲೂರು, ಶ್ರೀನಿವಾಸಪುರ, ಬಂಗಾರಪೇಟೆ, ಮುಳಬಾಗಿಲು ತಾಲೂಕುಗಳು ಮತ್ತು ಕೆ.ಜಿ.ಎಫ್. ನಗರ ಹಾಗೂ ಕೋಲಾರ ಉತ್ತರ ಜಿಲ್ಲೆಯ ವ್ಯಾಪ್ತಿಗೆ ಚಿಕ್ಕಬಳ್ಳಾಪುರ, ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು, ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲೂಕಗಳನ್ನು ಸೇರಿಸಲಾಗಿದೆ. ಈ ಎರಡೂ ವಿಭಾಗಗಳ ಉಸ್ತುವಾರಿಗಾಗಿ ಕೋಲಾರ ಹಾಗೂ ಚಿಕ್ಕಬಳ್ಳಾಪುರಗಳಲ್ಲಿ ಒಬ್ಬೊಬ್ಬ ಉಪ ನಿರ್ದೇಶಕರಿದ್ದಾರೆ. ಈ ಉಪ ನಿರ್ದೇಶಕರ ಅಧೀನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಶಿಕ್ಷಣ ಸಂಯೋಜಕರು ಹೀಗೆ ವಿವಿಧ ದರ್ಜೆಯ ಅಧಿಕಾರಿ, ಸಿಬ್ಬಂದಿ ವರ್ಗ ಕಾರ್ಯನಿರ್ವಹಿಸುತ್ತಿದೆ.

ಒಂದರಿಂದ ಹತ್ತನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಶೈಕ್ಷಣಿಕ ಕಾರ್ಯಗಳ ಮೇಲ್ವಿಚಾರಣೆ, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ 'ಮಧ್ಯಾಹ್ನ ಬಿಸಿಯೂಟ' ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವುದು, ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಉಚಿತ ಪಠ್ಯಪುಸ್ತಕಗಳನ್ನು ಒದಗಿಸುವುದು, ಶಾಲೆಗಳ ಅಭಿವೃದ್ಧಿಗೆ ಅನುದಾನ ಹಂಚುವುದು, ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿಗಳ ಮೇಲ್ವಿಚಾರಣೆ ಮೊದಲಾದ ಕಾರ್ಯಗಳು ಈ ಇಲಾಖೆಗೆ ಸಂಬಂಧಿಸಿದ್ದಾಗಿವೆ. ಉಪ ನಿರ್ದೇಶಕರು ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮದ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುವರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯ್ತಿ ಕೋಲಾರ ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ (ಹೆಚ್ಚಿನ ವಿವರಕ್ಕೆ 'ಶಿಕ್ಷಣ ಮತ್ತು ಕ್ರೀಡೆ' ಅಧ್ಯಾಯ ನೋಡಿ).

**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ**

ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸುವುದು, ಉತ್ತಮವಾದ ಊಟ-ತಿಂಡಿಗಳ ವ್ಯವಸ್ಥೆ ಮಾಡುವುದು, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡುವುದು ಮೊದಲಾದ ಪ್ರೋತ್ಸಾಹ ಕಾರ್ಯಗಳ ಮೂಲಕ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಅಭಿವೃದ್ಧಿಶೀಲರಾಗುವಂತೆ ಮಾಡುವ ಉದ್ದೇಶದಿಂದ ಕೋಲಾರದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಕಛೇರಿಯನ್ನು ೧೯೭೭ರಲ್ಲಿ ಪ್ರಾರಂಭಿಸಲಾಗಿದೆ. ಜಿಲ್ಲಾ ಪಂಚಾಯತ್ ವ್ಯಾಪ್ತಿ ಅಧಿಕಾರ ಹೊಂದಿರುವ ಜಿಲ್ಲಾ ಅಧಿಕಾರಿ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಕಛೇರಿ ಮೇಲ್ವಿಚಾರಕ, ಪ್ರಥಮ ದರ್ಜೆ ಸಹಾಯಕ ಮೊದಲಾದ ಇತರ ಸಿಬ್ಬಂದಿ ಇದ್ದಾರೆ. ವಿಸ್ತರಣಾಧಿಕಾರಿಗಳು ತಾಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಆಯುಕ್ತರು ಅಲ್ಪ ಸಂಖ್ಯಾತರ ಇಲಾಖೆ, ಬೆಂಗಳೂರು ಅವರು

ಮೇಲಧಿಕಾರಿಯಾಗಿದ್ದಾರೆ. ರಾಜ್ಯಮಟ್ಟದಲ್ಲಿ ಅಲ್ಪ ಸಂಖ್ಯಾತರ ಇಲಾಖೆಯನ್ನು ಪ್ರತ್ಯೇಕವಾಗಿ ರಚಿಸಿದ್ದರೂ ಜಿಲ್ಲಾಮಟ್ಟದಲ್ಲಿ ಒಬ್ಬರೇ ಜಿಲ್ಲಾ ಅಧಿಕಾರಿಯು ಈ ಎರಡೂ ಇಲಾಖೆಗಳ ಕಾರ್ಯಗಳನ್ನು ನಿರ್ವಹಿಸುತ್ತಾರೆ.

**ಅಂಚೆ ಇಲಾಖೆ**

ಇದು ಕೇಂದ್ರ ಸರ್ಕಾರದ ಒಂದು ಪ್ರಮುಖ ಇಲಾಖೆಯಾಗಿದೆ. ಜಿಲ್ಲೆಯಲ್ಲಿ ಅಂಚೆ ವ್ಯವಹರಣೆಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು, ಅಂಚೆ ಕಛೇರಿಗಳ ಕಾರ್ಯನಿರ್ವಹಣೆ ಮೇಲೆ ಸೂಕ್ತ ನಿಯಂತ್ರಣ ಇಟ್ಟುಕೊಳ್ಳುವುದು, ತಪ್ಪಿತಸ್ಥ ಅಂಚೆ ನೌಕರರ ಮೇಲೆ ಅಗತ್ಯ ಶಿಸ್ತು ಕ್ರಮ ಜರುಗಿಸುವುದು ಮೊದಲಾದ ಉದ್ದೇಶಗಳಿಂದ ಕೋಲಾರ ವಿಭಾಗದ ಹಿರಿಯ ಅಂಚೆ ಅಧೀಕ್ಷಕರ ಕಛೇರಿಯು ಅಕ್ಟೋಬರ್ ೧೯೬೫ರಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಂಚೆ ಕಛೇರಿಗಳ ಹಿರಿಯ ಅಧೀಕ್ಷಕರು ಈ ಕಛೇರಿಯ ಮುಖ್ಯಾಧಿಕಾರಿಯಾಗಿದ್ದು ಅವರು ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುತ್ತಾರೆ. ಕಛೇರಿಯಲ್ಲಿ ಅವರ ನೆರವಿಗೆ ಇಬ್ಬರು ಸಹಾಯಕ ಅಧೀಕ್ಷಕರು, ಇಬ್ಬರು ನಿರೀಕ್ಷಕರೂ ಸೇರಿದಂತೆ ಒಟ್ಟು ೨೨ ವಿವಿಧ ಸಿಬ್ಬಂದಿಗಳಿದ್ದಾರೆ. ವಿವಿಧ ಉಳಿತಾಯ ಬ್ಯಾಂಕ್ ಯೋಜನೆ, ಉಳಿತಾಯ ಪತ್ರ ಯೋಜನೆ, ಕಿಸಾನ್ ವಿಕಾಸ್ ಪತ್ರ ಸಾರ್ವಜನಿಕ ಭವಿಷ್ಯ ನಿಧಿ ಮೊದಲಾದ ಯೋಜನೆಗಳನ್ನು ಈ ಕಛೇರಿಯು ಕಾರ್ಯರೂಪಕ್ಕೆ ತರುತ್ತಿದೆ. ಪೋಸ್ಟಲ್ ಮ್ಯಾನ್ಯುಯಲ್ಸ್, ಸೇವಿಂಗ್ಸ್ ಬ್ಯಾಂಕ್ ಮ್ಯಾನ್ಯುಯಲ್ಸ್, ಸೆಂಟ್ರಲ್ ಸಿವಿಲ್ ಸರ್ವೀಸಸ್ (ಕ್ಲಾಸಿಫಿಕೇಷನ್, ಕಂಟ್ರೋಲ್ ಅಂಡ್ ಅಪೀಲ್) ರೂಲ್ಸ್ ೧೯೬೫, ಗ್ರಾಮೀಣ ಡಾಕ್ ಸೇವಕ್ (ಕಾಂಡಕ್ಟ್ ಅಂಡ್ ಎಂಪ್ಲಾಯ್‌ಮೆಂಟ್) ರೂಲ್ಸ್, ೨೦೦೧ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯ ಆಡಳಿತ ನಿರ್ವಹಣೆಯಲ್ಲಿ ಪಾಲಿಸಲಾಗುತ್ತದೆ. ಪೋಸ್ಟ್‌ಮಾಸ್ಟರ್‌ಜನರಲ್, ದಕ್ಷಿಣ ಕರ್ನಾಟಕ ವಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

ಇದಲ್ಲದೆ ಆದಾಯ ತೆರಿಗೆ, ದೂರಸಂಪರ್ಕ, ಕೇಂದ್ರ ಅಬಕಾರಿ, ಕೇಂದ್ರ ಗುಪ್ತದಳ, ನೆಹರು ಯುವಕ ಕೇಂದ್ರ ಮೊದಲಾದ ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಹಾಲು ಒಕ್ಕೂಟ ನಿಗಮ, ಕೃಷಿ ಇಲಾಖೆ, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಸಾಕ್ಷರತಾ ಸಮಿತಿ, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ನಗರ ಯೋಜನಾ ಇಲಾಖೆ, ಜಿಲ್ಲಾ ಕಾರಾಗೃಹ ಮೊದಲಾದ ಇಲಾಖೆಗಳು, ಮಂಡಳಿಗಳು, ನಿಗಮಗಳು ಕೋಲಾರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.